# ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಮತ್ತು ದ್ವೀಪ ಸಂರಕ್ಷಣೆ ವಲಯ ಅಧಿಸೂಚನೆ 2011 ಕುರಿತು ಪದೇಪದೇ ಕೇಳಲಾಗುವ ಪ್ರಶ್ನೆಗಳು

## I. ಸಾಮಾನ್ಯ

**1. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಅನ್ನು ಹೊರಡಿಸಬೇಕಾದ ಅಗತ್ಯವಾದರೂ ಏನು?**

ನಮ್ಮ ಕರಾವಳಿ ಪರಿಸರದ ರಕ್ಷಣೆ ಮತ್ತು ಸಂರಕ್ಷಣೆಯನ್ನು ಮಾಡುವುದಕ್ಕಾಗಿ ವ್ಯಾಪಕ ಕ್ರಮಗಳನ್ನು ಒದಗಿಸುವ ಗುರಿಯಿಂದ ಪರಿಸರ (ಸಂರಕ್ಷಣಾ) ಅಧಿನಿಯಮ 1986ರ ಅಡಿಯಲ್ಲಿ 19-2-1991ರಂದು ಪರಿಸರ ಮತ್ತು ಅರಣ್ಯಗಳ ಮಂತ್ರಾಲಯದವರು ಕರಾವಳಿ ನಿಯಂತ್ರಣ ವಲಯ (CRZ) ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಹೀಗಿದ್ದರೂ ಕಳೆದ ಎರಡು ದಶಕಗಳಲ್ಲಿ 1991ರ ಅಧಿಸೂಚನೆಯನ್ನು ಅನುಷ್ಠಾನ ಗೊಳಿಸುವಾಗ ಈ ಮುಂದಿನ ಸಮಸ್ಯೆಗಳು ಹೊರ ಹೊಮ್ಮಿವೆ.

- 1991ರ ಅಧಿಸೂಚನೆಯು ಮುಖ್ಯ ಭೂಮಿಯಲ್ಲಿ 5500 ಕಿಲೋಮೀಟರ್ ಮತ್ತು ಅಂಡಮಾನ್ ಹಾಗೂ ನಿಕೋಬಾರ್ ಮತ್ತು ಲಕ್ಷದ್ವೀಪಗಳಲ್ಲಿ 2000 ಕಿಲೋಮೀಟರ್‌ಗಳಷ್ಟು ಇರುವ ಭಾರತದ ಇಡೀ ಕರಾವಳಿ ತೀರಗಳಿಗೆ ಅನ್ವಯಿಸುವ ಒಂದೇ ನಿಯಂತ್ರಣ ನಿಯಮಗಳನ್ನು ನಿಗದಿಪಡಿಸಿತು. ಹೀಗಾಗಿ ಅದು, ಜೀವಿ ವೈವಿಧ್ಯ, ಜಲ ಚಲನವಲನ ಪರಿಸ್ಥಿತಿಗಳು, ಜನಸಂಖ್ಯೆ ವಿನ್ಯಾಸಗಳು, ಪ್ರಾಕೃತಿಕ ಸಂಪನ್ಮೂಲಗಳು, ಭೂ ಮೇಲ್ಮೈ ಲಕ್ಷಣಗಳು ಮತ್ತು ಭೌಗೋಳಿಕ ಲಕ್ಷಣಗಳು ಮುಂತಾದ ಅಂಶಗಳ ದೃಷ್ಟಿಯಲ್ಲಿ ಭಾರತದ ತೀರ ಪ್ರದೇಶ ಬಹಳ ವಿಭಿನ್ನತೆ ಹೊಂದಿರುವಂತಹುದು ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಲು ತಪ್ಪಿದೆ.
- 1991ರ ಅಧಿಸೂಚನೆಯಲ್ಲಿ ಸಿಆರ್‌ಜೆಡ್ (CRZ) ತೀರ್ವಳಿ ಪಡೆದುಕೊಳ್ಳಲು ಯಾವುದೇ ಸ್ಪಷ್ಟವಾದ ಪ್ರಕ್ರಿಯೆಯನ್ನು ವಿಧಿಸಿಲ್ಲ ಮತ್ತು ಯಾವ ಸಮಯದ ಮಿತಿಯನ್ನೂ ನಿಗದಿಪಡಿಸಿಲ್ಲ. ಅಷ್ಟೇ ಅಲ್ಲ, ತೀರ್ವಳಿ ಅರ್ಜಿಗಳನ್ನು ಸಲ್ಲಿಸಲು ಯಾವುದೇ ನಮೂನೆಯನ್ನು ನೀಡಿರಲಿಲ್ಲ.
- 1991ರ ಅಧಿಸೂಚನೆಯಲ್ಲಿ ಒಂದು ತೀರ್ವಳಿ ಅನುಮೋದನೆ ನೀಡಿದ ತರುವಾಯದ ನಿಗಾವಣೆ ಕಾರ್ಯ ಯಂತ್ರವನ್ನಾಗಲಿ ಅಥವಾ ಉಲ್ಲಂಘನೆಯನ್ನು ತಡೆಯಲು ಒಂದು ಸುಸ್ಪಷ್ಟ ಜಾರಿ ಕಾರ್ಯ ಯಂತ್ರವನ್ನಾಗಲಿ ಒದಗಿಸಿಲ್ಲ.
- 1991ರ ಅಧಿಸೂಚನೆಯು ಉಬ್ಬರ ವಿಳಿತಗಳ ನಡುವಿನ ಪ್ರದೇಶದಲ್ಲಿ ಮತ್ತು ಭೂಮಿ ಕಡೆಗೆ 500 ಮೀಟರುಗಳ ಒಳಗೆ ನಡೆಯುವ ಎಲ್ಲ ಅಭಿವೃದ್ಧಿ ಚಟುವಟಿಕೆಗಳನ್ನು

ನಿಯಂತ್ರಿಸಲು ಬಯಸಿತ್ತು. ಭೂಮಿ ಆಧಾರಿತ ಚಟುವಟಿಕೆಗಳಿಂದ ಆಗುವ ಮಾಲಿನ್ಯವನ್ನು ಕುರಿತು 1991ರ ಅಧಿಸೂಚನೆಯಲ್ಲಿ ಯಾವುದೇ ಸ್ಥಿರವಾದ ಕ್ರಮ ಕೈಗೊಳ್ಳುವ ಕುರಿತು ಸೂಚನೆ ಇಲ್ಲ.

- 1991ರ ಅಧಿಸೂಚನೆಯ ನಿರ್ಬಂಧಕ ಸ್ವರೂಪವು ಕೆಲವೊಂದು ಜೀವಿ-ಪರಿಸರ ದೃಷ್ಟಿಯಿಂದ ಸೂಕ್ಷ್ಮವಾದ ಕರಾವಳಿ ತೀರಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಸಮುದಾಯಗಳಿಗೆ ಬಹಳ ಕಷ್ಟ ಉಂಟು ಮಾಡಿದೆ. ಮುಂಬೈ ಕೊಳೆಗೇರಿ ಜನರು ಮತ್ತು ಅಭದ್ರವಾದ ಹಾಗೂ ಅಸುರಕ್ಷಿತ ಕಟ್ಟಡಗಳಲ್ಲಿ ವಾಸಿಸುವ ಜನರು, ಕೇರಳದ ಹಿನ್ನೀರಿನಲ್ಲಿರುವ ದ್ವೀಪಗಳಲ್ಲಿ ವಾಸಿಸುತ್ತಿರುವ ಜನ ಸಮುದಾಯ, ಗೋವಾದ ಕರಾವಳಿ ಉದ್ದಕ್ಕೂ ವಾಸಿಸುತ್ತಿರುವ ಸ್ಥಳೀಯ ಸಮುದಾಯಗಳು ಮತ್ತಿತರ ಸಾಂಪ್ರದಾಯಿಕ ಕರಾವಳಿ ನಿವಾಸಿಗಳು ಇಂಥ ತೊಂದರೆಗೀಡಾದ ಜನರು ಒಳಗೊಳ್ಳುತ್ತಾರೆ.

- 1991ರ ಅಧಿಸೂಚನೆಯನ್ನು ವಿವಿಧ ರಾಜ್ಯ ಸರ್ಕಾರಗಳು, ಕೇಂದ್ರ ಮಂತ್ರಾಲಯಗಳು, ಸರ್ಕಾರೇತರ ಸಂಸ್ಥೆಗಳು ಮುಂತಾದವುಗಳ ವಿನಂತಿಯ ಮೇರೆಗೆ ಸುಮಾರು 25 ಸಲ ತಿದ್ದುಪಡಿ ಮಾಡಲಾಗಿದೆ. ಇದಲ್ಲದೆ ಕೆಲವೊಂದು ಉಪಬಂಧಗಳ ಬಗ್ಗೆ ಸ್ಪಷ್ಟೀಕರಣ ನೀಡಿ ಪರಿಸರ ಮತ್ತು ಅರಣ್ಯ ಮಂತ್ರಾಲಯದವರು ಅನೇಕ ಕಚೇರಿ ಆದೇಶಗಳನ್ನು ಹೊರಡಿಸಿದ್ದಾರೆ. 1991ರ ಅಧಿಸೂಚನೆಗೆ ಆಗಾಗ್ಗೆ ಮಾಡಿದ ಬದಲಾವಣೆಗಳನ್ನೆಲ್ಲಾ 2011ರ ಅಧಿಸೂಚನೆಯಲ್ಲಿ ಕ್ರೋಡೀಕರಿಸಲಾಗಿದೆ.

2011ರ ಅಧಿಸೂಚನೆಯು ಡಾ॥ ಎಂ.ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯ ಕರಾವಳಿ ನಿಯಂತ್ರಕಗಳ ಸಮಿತಿಯ ವರದಿಯಾದ **ಅಂತಿಮ ಸೀಮಾರೇಖೆ**ಯಲ್ಲಿ ಮಾಡಿದ ಶಿಫಾರಸ್ಸುಗಳು ಮತ್ತು ವಿವಿಧ ಕರಾವಳಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಸಿದ ವಿವಿಧ ಸಮಾಲೋಚನಾ ಸಭೆಗಳ ತೀರ್ಮಾನಗಳ ಆಧಾರದ ಮೇಲೆ ಮೇಲ್ಕಂಡ ಎಲ್ಲ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಂಡು ಇವೆಲ್ಲವನ್ನು ಸಮಗ್ರ ರೀತಿಯಲ್ಲಿ ಪರಿಹರಿಸಿದೆ. ಗೋವಾ, ಚೆನ್ನೈ, ಪುರಿ, ಕೊಚ್ಚಿ ಮತ್ತು ಮುಂಬೈಗಳಲ್ಲಿ ನಡೆದ ಸಮಾಲೋಚನಾ ಸಭೆಗಳಲ್ಲಿ (ಪ್ರಭಾರಿ) ರಾಜ್ಯ ಮಂತ್ರಿಗಳು ಖುದ್ದಾಗಿ ಅಧ್ಯಕ್ಷತೆ ವಹಿಸಿದ್ದರು.

**2. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ, 2011ರ ಧ್ಯೇಯೋದ್ದೇಶಗಳು ಯಾವುವು?**

ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011ರ ಮುಖ್ಯ ಧ್ಯೇಯೋದ್ದೇಶಗಳೇನೆಂದರೆ:

- ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮೀನುಗಾರ ಸಮುದಾಯ ಮತ್ತಿತರ ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯ ಭದ್ರತೆ ದೊರಕುವಂತೆ ನೋಡಿಕೊಳ್ಳುವುದು.

- ಕರಾವಳಿ ತೀರ ಪ್ರದೇಶಗಳನ್ನು ಕಾಪಾಡಿ ಸಂರಕ್ಷಿಸಿಕೊಂಡು ಬರುವುದು.

- ಕರಾವಳಿ ಪ್ರದೇಶಗಳಲ್ಲಿ ಪ್ರಾಕೃತಿಕ ವಿಕೋಪಗಳು ಮತ್ತು ಜಾಗತಿಕ ತಾಪಮಾನ ಏರಿಕೆಯ ಅಪಾಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಒಂದು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಗೆ ಉತ್ತೇಜನ ನೀಡುವುದು.

## II. 2011ರ ಅಧಿಸೂಚನೆಯ ಅಡಿಯಲ್ಲಿ ಸಿಆರ್‌ಜೆಡ್ (CRZ) ಪ್ರದೇಶಗಳನ್ನು ಗುರುತಿಸುವುದು ಮತ್ತು ವರ್ಗೀಕರಣ

**1. 2011ರ ಅಧಿಸೂಚನೆಯ ಅಡಿಯಲ್ಲಿ ಕರಾವಳಿ ವಲಯಗಳನ್ನು ಹೇಗೆ ವರ್ಗೀಕರಿಸಲಾಗಿದೆ?**

1991ರ ಅಧಿಸೂಚನೆಯಲ್ಲಿ CRZ ಪ್ರದೇಶವನ್ನು CRZ-I (ಪರಿಸರ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶ). CRZ-II (ಕಟ್ಟಡ ನಿರ್ಮಿತ ಪ್ರದೇಶ). CRZ-III (ಗ್ರಾಮೀಣ ಪ್ರದೇಶ) ಮತ್ತು CRZ-IV (ಜಲ ಪ್ರದೇಶ). 2011ರ ಅಧಿಸೂಚನೆಯಲ್ಲಿ ಈ ವರ್ಗೀಕರಣವನ್ನು ಉಳಿಸಿಕೊಂಡು ಬರಲಾಗಿದೆ. ಮಾಡಿರುವ ಏಕೈಕ ಬದಲಾವಣೆ ಎಂದರೆ CRZ-IV ಅನ್ನು ಸೇರಿಸಿರುವುದು ಇದರಲ್ಲಿ ಜಲಾಂತರ್ಗತ ಸೀಮಾ ಪ್ರದೇಶ ಮತ್ತು ಉಬ್ಬರ ವಿಳಿತದಿಂದ ಪ್ರಭಾವಿತ ಜಲ ನಿಕಾಯಗಳು ಸೇರುತ್ತವೆ.

ಮೊತ್ತಮೊದಲಿಗೆ ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಲಕ್ಷದ್ವೀಪಗಳನ್ನು ರಕ್ಷಿಸುವುದಕ್ಕಾಗಿ ಪರಿಸರ (ಸಂರಕ್ಷಣಾ) ಅಧಿನಿಯಮ, 1986ರ ಅಡಿಯಲ್ಲಿ ದ್ವೀಪ ಸಂರಕ್ಷಣಾ ವಲಯಕ್ಕೆಂದೇ ಒಂದು ಪ್ರತ್ಯೇಕ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ.

**2. CRZ-I ಪ್ರವರ್ಗದಲ್ಲಿ ಬರಲು ಅರ್ಹವಾದ ಕರಾವಳಿ ಪ್ರದೇಶಗಳು ಯಾವುವು?**

CRZ ಅಧಿಸೂಚನೆ 2011ರಲ್ಲಿ, CRZ-Iರ ಪ್ರವರ್ಗದಲ್ಲಿ ಬರುವಂಥ ಪ್ರದೇಶಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಲಾಗಿದೆ. ಅವು ಯಾವುವೆಂದರೆ:-

- ಕಾಂಡ್ಲ ಕಾಡುಗಳು; ಕಾಂಡ್ಲ ಕಾಡು ಪ್ರದೇಶವು 1000 ಚದರ ಮೀಟರುಗಳನ್ನು ಮೀರಿದ್ದರೆ 50 ಮೀಟರ್‌ಗಳ ಒಂದು ಬಫರ್ ಪ್ರದೇಶವನ್ನು ಒದಗಿಸತಕ್ಕದ್ದು.
- ಹವಳಗಳು ಮತ್ತು ಹವಳ ದ್ವೀಪಗಳು ಮತ್ತು ಅದರ ಜೊತೆಗೂಡಿದ ಜೀವಿ ವೈವಿಧ್ಯ.
- ಮರಳು ದಿಬ್ಬಗಳು.
- ಜೀವಿ ಸಮುದಾಯವಿರುವ ಕೆಸರು ಫ್ಲಾಟ್‌ಗಳು.
- ರಾಷ್ಟ್ರೀಯ ಉದ್ಯಾನಗಳು, ಸಾಗರ ಉದ್ಯಾನಗಳು, ಅಭಯಾರಣ್ಯಗಳು, ಮೀಸಲು ಅರಣ್ಯಗಳು, ವನ್ಯಜೀವಿ ಜೀವಾ ವಾಸಗಳು ಮತ್ತು ವನ್ಯಜೀವಿ (ಸಂರಕ್ಷಣಾ) ಅಧಿ

ನಿಯಮ, 1972 (1972ರ 53) ಅರಣ್ಯ ಸಂರಕ್ಷಣಾ ಅಧಿನಿಯಮ, 1980 (1980ರ 69) ಅಥವಾ ಪರಿಸರ (ಸಂರಕ್ಷಣಾ) ಅಧಿನಿಯಮ 1986(1986ರ 29)ರ ಉಪಬಂಧಗಳ ಅಡಿಯಲ್ಲಿನ ಇತರ ರಕ್ಷಿತ ಪ್ರದೇಶಗಳು, ಈ ಕೆಳಕಂಡವುಗಳನ್ನು ಒಳಗೊಂಡ ಪ್ರದೇಶಗಳು.

- ಉಪ್ಪು ಜೌಗುಪ್ರದೇಶ
- ಕಡಲಾಮೆ ಮರಿ ಮಾಡುವ ಪ್ರದೇಶಗಳು
- ಲಾಳ ಏಡಿ ನಿವಾಸ ಸ್ಥಳಗಳು
- ಸಮುದ್ರ ಹುಲ್ಲು ಪಾತಿಗಳು
- ಹಕ್ಕಿಗಳು ಗೂಡು ಕಟ್ಟುವ ಜಾಗ
- ವಾಸ್ತುಶಿಲ್ಪ ಮಹತ್ವವುಳ್ಳ ಕಟ್ಟಡಗಳಿರುವ ಪ್ರದೇಶಗಳು ಮತ್ತು ಪರಂಪರಾ ತಾಣಗಳು.

ಇಳಿತ ರೇಖೆ ಮತ್ತು ಉಬ್ಬರ ರೇಖೆ ನಡುವಿನ ಪ್ರದೇಶ

3. **CRZ-Iನಲ್ಲಿ ಅನುಮತಿಸಬಹುದಾದ ಚಟುವಟಿಕೆಗಳು ಯಾವುವು?**

CRZ-Iನಲ್ಲಿ 2011ರ ಅಧಿಸೂಚನೆ ಮೂಲಕ ಅನುಮತಿಸುವ ಚಟುವಟಿಕೆಗಳೆಂದರೆ 1991ರ ಅಧಿಸೂಚನೆಯಲ್ಲಿ ಅನುಮತಿಸಲಾಗಿದ್ದ ಮತ್ತು ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದ ಚಟುವಟಿಕೆಗಳು. ಅವು ಈ ಮುಂದಿನವುಗಳಿಗೆ ಸಂಬಂಧಿಸಿದೆ.

(i) ಈ ಮುಂದಿನವುಗಳ ಹೊರತಾಗಿ ಯಾವುದೇ ಹೊಸ ನಿರ್ಮಾಣವನ್ನು ಅನುಮತಿಸತಕ್ಕದ್ದಲ್ಲ.

- ಅಣುಶಕ್ತಿ ಇಲಾಖೆಗೆ ಸಂಬಂಧಿಸಿದ ಯೋಜನೆಗಳು.
- ಟ್ರಾನ್ಸ್‌ಮಿಷನ್ ಲೈನುಗಳೂ ಸೇರಿದಂತೆ ಪೈಪುಲೈನುಗಳು.
- ಸಾಗಣೆ ವ್ಯವಸ್ಥೆಗಳು.
- CRZ-Iರ ಅಡಿಯಲ್ಲಿ ಅನುಮತಿಸಬಹುದಾದ ಚಟುವಟಿಕೆಗಳಿಗೆ ಅತ್ಯವಶ್ಯಕವಾದ ಸೌಕರ್ಯಗಳು.
- ಭಾರತೀಯ ಪವನಶಾಸ್ತ್ರ ಇಲಾಖೆಯವರಿಂದ ಸೈಕ್ಲೋನು ಚಲನವಲನ ಹಾಗೂ ಮುನ್ಸೂಚನೆ ನೀಡಿಕೆಗಾಗಿ ಹವಾಮಾನ ರಡಾರ್‌ಗಳ ಸ್ಥಾಪನೆ.
- ಇಳಿತ ರೇಖೆ ಮತ್ತು ಉಬ್ಬರ ರೇಖೆಗಳ ನಡುವೆ ಉಬ್ಬರ ಇಳಿತಗಳ ಹರಿವನ್ನು ಬಾಧಿಸದ ರೀತಿಯಲ್ಲಿ ಮೆಟ್ಟುಗಣೆ ಅಥವಾ ಕಂಬಗಳ ಮೇಲೆ ಬಂದರುಗಳ ನಡುವೆ ಸಮುದ್ರ ಸಂಪರ್ಕ ಮತ್ತು ರಸ್ತೆಗಳ ನಿರ್ಮಾಣ.

- ನವಿ ಮುಂಬೈನಲ್ಲಿ ಮಾತ್ರವೇ ಈಗಾಗಲೇ ಅನುಮತಿಸಲಾಗಿರುವ ಹಸಿರು ಮೈದಾನ ವಿಮಾನ ನಿಲ್ದಾಣದ ಅಭಿವೃದ್ಧಿ.

(ii) ಜೀವಿ ಪರಿಸರ ದೃಷ್ಟಿಯಿಂದ ನಾಜೂಕಾಗಿರದ ಉಬ್ಬರ ರೇಖೆ, ಇಳಿತ ರೇಖೆ ನಡುವಿನ ಪ್ರದೇಶಗಳಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಅನುಮತಿಸಬಹುದು.

- ನೈಸರ್ಗಿಕ ಅನಿಲದ ಶೋಧ ಮತ್ತು ಹೊರತೆಗೆಯುವಿಕೆ.
- ಸಂಬಂಧಪಟ್ಟ CZMAಯಿಂದ ಅನುಮೋದನೆ ಪಡೆದು ಜೀವಾವರಣ ಮೀಸಲು ಪ್ರದೇಶಗಳಲ್ಲಿ ಪರಂಪರಾಗತವಾಗಿ ವಾಸಿಸುತ್ತಿರುವವರ ಹಕ್ಕುಗಳನ್ನು ಪೂರೈಸಲು ಅಗತ್ಯವಾದ, ಚಿಕಿತ್ಸಾಲಯಗಳು, ಶಾಲೆಗಳು, ಸಾರ್ವಜನಿಕ ಮಳೆ ಆಶ್ರಯಗಳು, ಸಮುದಾಯ ಶೌಚಾಲಯಗಳು, ಸೇತುವೆಗಳು, ರಸ್ತೆಗಳು, ಜಟ್ಟಿಗಳು, ನೀರು ಸರಬರಾಜು, ಚರಂಡಿ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ.
- ಸಮುದ್ರ ನೀರನ್ನು ಬಿಸಿಲಿನಲ್ಲಿ ಒಣಗಿಸಿ ಉಪ್ಪು ಮಾಡುವುದು.
- ಲವಣ ನಿವಾರಣಾ ಸ್ಥಾವರಗಳು.
- ಅಡುಗೆ ಎಣ್ಣೆ, ರಸಗೊಬ್ಬರ ಮತ್ತು ಆಹಾರ ಧಾನ್ಯಗಳನ್ನು ಅಧಿಸೂಚಿತ ಬಂದರುಗಳಲ್ಲಿ ದಾಸ್ತಾನು ಮಾಡುವುದು.
- ಉಬ್ಬರ ವಿಳಿತದ ನೀರಿನ ಹರಿವಿಗೆ ತೊಂದರೆ ಆಗದಂತೆ ಬಂದರುಗಳ ನಡುವಿನ ಸಮುದ್ರ ಸಂಪರ್ಕ, ರಸ್ತೆಗಳನ್ನು ಮೆಟ್ಟುಗಣೆಗಳು ಅಥವಾ ಕಂಬಗಳ ಮೇಲೆ ನಿರ್ಮಿಸುವುದು.

**4. CRZ-II ಪ್ರವರ್ಗದಲ್ಲಿ ಬರಲು ಅರ್ಹವಾದ ಕರಾವಳಿ ಪ್ರದೇಶಗಳು ಯಾವುವು?**

ಈ ಅಧಿಸೂಚನೆಯಲ್ಲಿ CRZ-II ಪ್ರದೇಶವೆಂದರೆ ಮುನಿಸಿಪಲ್ ಮಿತಿಗಳೊಳಗೆ ಇದ್ದು ತೀರದ ರೇಖೆ ವರೆಗೆ ಅಥವಾ ಅದಕ್ಕೆ ಹತ್ತಿರವಾಗಿ ಅಭಿವೃದ್ಧಿ ಹೊಂದಿದ ಪ್ರದೇಶಗಳು.

**5. CRZ-II ಪ್ರದೇಶದಲ್ಲಿ ಅನುಮತಿಸಲಾಗುವ ಚಟುವಟಿಕೆಗಳು ಯಾವುವು?**

ಪ್ರಸಕ್ತ ಇರುವ ರಸ್ತೆ, ಅಧಿಕೃತ ನಿರ್ಮಿತಿಯ ಅಥವಾ ಯಾವ ಅಧಿಕೃತ ನಿರ್ಮಿತಿಯೂ ಇಲ್ಲದಿದ್ದರೆ ವಿಕೋಪ ರೇಖೆಯ ಭೂಮಿಯ ಕಡೆ ಭಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿಸಲಾಗಿದೆ. ಲವಣ ನಿವಾರಕ ಸ್ಥಾವರಗಳು ಮತ್ತು ಅಪಾಯಕಾರಿಯಲ್ಲದ ಸರಕುಗಳ ದಾಸ್ತಾನನ್ನು ಅನುಮತಿಸಬಹುದು. ನಿರ್ಮಾಣ ಯೋಜನೆಗಳಿಗೆ ನೆಲ ಪ್ರದೇಶ ಸೂಚ್ಯಂಕ ಮತ್ತು ನೆಲ ವಿಸ್ತೀರ್ಣ ಅನುಪಾತಗಳು CRZ ಅಧಿಸೂಚನೆ 2011ರಲ್ಲಿ ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಅಂದರೆ ಮುಖ್ಯವಾಗಿ ಕೊಳೆಗೇರಿ ಪುನರಭಿವೃದ್ಧಿ ಮತ್ತು ಮುರುಕಲಾದ ಕಟ್ಟಡಗಳ ಮರು ನಿರ್ಮಾಣಕ್ಕೆ ಸಂಬಂಧಿಸಿರುವುದನ್ನು ಬಿಟ್ಟು ಉಳಿದಂತೆ 19-2-1991ರಲ್ಲಿ ಹೇಳಿರುವಂತೆಯೇ ಇರತಕ್ಕದ್ದು.

**6. CRZ-III ಪ್ರವರ್ಗದ ಒಳಗೆ ಬರಲು ಅರ್ಹವಾದ ಕರಾವಳಿ ಪ್ರದೇಶಗಳು ಯಾವುವು? ಈ ಪ್ರದೇಶಗಳಲ್ಲಿ ಅನುಮತಿಸಿದ ಚಟುವಟಿಕೆಗಳು ಯಾವುವು?**

CRZ-III ಪ್ರದೇಶಗಳೆಂದರೆ ಹೋಲಿಕೆಯಲ್ಲಿ ಹೆಚ್ಚು ಕದಡಿರದ ಮತ್ತು ಪ್ರವರ್ಗ I ಅಥವಾ IIರಲ್ಲಿ ಬಾರದ ಹಾಗೂ ಗಣನೀಯವಾಗಿ ಅಭಿವೃದ್ಧಿ ಹೊಂದಿರದ ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನು ಒಳಗೊಳ್ಳುತ್ತದೆ.

CRZ ಅಧಿಸೂಚನೆ 1991ರಲ್ಲಿ ಪಟ್ಟಿ ಮಾಡಿದ ಎಲ್ಲ ಅನುಮತಿಸಬಹುದಾದ ಚಟುವಟಿಕೆಗಳನ್ನು ಈ ಅಧಿಸೂಚನೆಯಲ್ಲಿ ಉಳಿಸಿಕೊಳ್ಳಲಾಗಿದೆ. ಉಬ್ಬರ ರೇಖೆಯಿಂದ 0–200 ಮೀಟರು ಪ್ರದೇಶದಲ್ಲಿ ಯಾವ ನಿರ್ಮಾಣಕ್ಕೂ ಅವಕಾಶವಿಲ್ಲ. ಇದನ್ನು ಅಭಿವೃದ್ಧಿ ನಿಷಿದ್ಧ ವಲಯ ಎಂದು ಕರೆಯಲಾಗಿದೆ. ಕೃಷಿ, ತೋಟಗಾರಿಕೆ, ಹೂತೋಟ, ಹುಲ್ಲುಗಾವಲು, ಉದ್ಯಾನ, ಆಟದ ಮೈದಾನ, ವನ ನಿರ್ಮಾಣ, ಅಣುಶಕ್ತಿ ಇಲಾಖೆಯ ಯೋಜನೆಗಳು, ವಿರಳ ಖನಿಜಗಳ ಗಣಿಗಾರಿಕೆ, ಸಮುದ್ರ ನೀರಿನಿಂದ ಉಪ್ಪು ತಯಾರಿಕೆ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ದ್ರವೀಕೃತ ನಿಸರ್ಗಾನಿಲಗಳ ಸ್ವೀಕೃತಿ, ದಾಸ್ತಾನು ಮತ್ತು ಮರು ಅನಿಲೀಕರಣದ ಸೌಕರ್ಯಗಳು, ಸಂಪ್ರದಾಯೇತರ ಇಂಧನ ಮೂಲಗಳ ಮೂಲಕ ವಿದ್ಯುತ್ ಉತ್ಪಾದನೆಗೆ ಸೌಕರ್ಯಗಳು ಮತ್ತು ಕೆಲವೊಂದು ಸಾರ್ವಜನಿಕ ಸೌಕರ್ಯಗಳನ್ನು ಈ ವಲಯದಲ್ಲಿ ಒದಗಿಸಬಹುದಾಗಿದೆ.

ಉಬ್ಬರ ರೇಖೆಯಿಂದ 200–500 ಮೀಟರುಗಳ ನಡುವಿನ ಪ್ರದೇಶದಲ್ಲಿ ಸ್ಥಳೀಯ ಸಮುದಾಯಗಳ ಮನೆಗಳ ನಿರ್ಮಾಣ ಮತ್ತು ರಿಪೇರಿ, ನವಿ ಮುಂಬೈನ ಹಸಿರು ಮೈದಾನ ವಿಮಾನ ನಿಲ್ದಾಣವೂ ಸೇರಿದಂತೆ ಪ್ರವಾಸೋದ್ಯಮ ಯೋಜನೆಗಳು, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ದ್ರವೀಕೃತ ನಿಸರ್ಗಾನಿಲದ ಸ್ವೀಕೃತಿ, ದಾಸ್ತಾನು, ಮರು ಅನಿಲೀಕರಣ, ಅಪಾಯಕಾರಿಯಲ್ಲದ ಸರಕುಗಳ ದಾಸ್ತಾನು, ಲವಣ ನಿವಾರಕ ಸ್ಥಾವರಗಳು. ಸಾಂಪ್ರದಾಯಿಕೇತರ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಸೌಕರ್ಯಗಳು ಮುಂತಾದುವನ್ನು ಅನುಮತಿಸಬಹುದು.

**7. CRZ-IV ಪ್ರವರ್ಗದಲ್ಲಿ ಬರಲು ಅರ್ಹವಾದ ಕರಾವಳಿ ಪ್ರದೇಶಗಳು ಯಾವುವು?**

ಇಳಿತ ರೇಖೆಯಿಂದ ಹಿಡಿದು ಜಲ ಸೀಮಾ ಪ್ರದೇಶದ ಮಿತಿಯೊಳಗೆ ಬರುವ ಇಡೀ ಜಲಾವೃತ ಪ್ರದೇಶ ಮತ್ತು ಉಬ್ಬರ ವಿಳಿತಗಳಿಂದ ಪ್ರಭಾವಿತ ಜಲ ನಿಕಾಯಗಳು CRZ-IV ಪ್ರದೇಶದಲ್ಲಿ ಬರುತ್ತವೆ.

**8. CRZ-IV ಪ್ರದೇಶದಲ್ಲಿ ಅನುಮತಿಸಬಹುದಾದ ಚಟುವಟಿಕೆಗಳು ಯಾವುವು?**

CRZ-IV ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಮತ್ತು ಸಂಬಂಧಪಟ್ಟ ಚಟುವಟಿಕೆಗಳನ್ನು ಸ್ಥಳೀಯ ಸಮುದಾಯದವರು ಮುಂದುವರಿಸಿಕೊಂಡು ಹೋಗಲು

ಯಾವ ಅಭ್ಯಂತರವೂ ಇಲ್ಲ, ಹೀಗಿದ್ದರೂ, ಸಂಸ್ಕರಿಸದ ಒಳ ಚರಂಡಿ ನೀರು, ಕೊಳೆ ನೀರು ಅಥವಾ ಘನ ತ್ಯಾಜ್ಯಗಳನ್ನು ಈ ಪ್ರದೇಶದಲ್ಲಿ ತಂದು ಸುರಿಯುವುದನ್ನು ನಿಷೇಧಿಸಲಾಗಿದೆ. ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ನಗರದ ಒಳಚರಂಡಿ ನೀರನ್ನು ಸಂಸ್ಕರಿಸಲು ಒಂದು ವ್ಯಾಪಕ ಯೋಜನೆಯನ್ನು ತಯಾರಿಸತಕ್ಕದ್ದು ಮತ್ತು ಅಲ್ಲಿಂದ ಎರಡು ವರ್ಷಗಳ ಒಳಗೆ ಅದನ್ನು ಕಾರ್ಯಗತಗೊಳಿಸತಕ್ಕದ್ದು.

## III. ಮೀನುಗಾರ ಸಮುದಾಯಕ್ಕೆ ವಿಶೇಷ ಉಪಬಂಧಗಳು

**1. ಮೀನುಗಾರ ಸಮುದಾಯಕ್ಕೆ ಅನುಕೂಲ ಒದಗಿಸಲು 2011ರ ಅಧಿಸೂಚನೆಯಲ್ಲಿ ಒಳಗೊಂಡ ಹೊಸ ಉಪಬಂಧಗಳು ಯಾವುವು?**

ಮೀನುಗಾರ ಸಮುದಾಯಗಳು ಪರಂಪರಾಗತವಾಗಿ ಕಡಲ ತೀರಗಳಲ್ಲಿ ವಾಸಿಸುವುದರಿಂದ ಅವರಿಗೆ CRZ ಅಧಿಸೂಚನೆಯ ಕರಡನ್ನು ತಯಾರಿಸುವಾಗ ಆದ್ಯ ಮಹತ್ವವನ್ನು ನೀಡಲಾಗಿದೆ.

ಅಧಿಸೂಚನೆಯು ಹೇಳುವ ಒಂದು ಧ್ಯೇಯೋದ್ದೇಶ ಹೀಗಿದೆ ''ಕರಾವಳಿ ಪ್ರದೇಶಗಳಲ್ಲಿ ವಾಸಿಸುವ ಮೀನುಗಾರ ಸಮುದಾಯ ಮತ್ತಿತರ ಸ್ಥಳೀಯ ಸಮುದಾಯಗಳ ಜೀವನೋಪಾಯ ಭದ್ರತೆ ಕಾಪಾಡುವುದು ಮತ್ತು ಕರಾವಳಿ ಪ್ರದೇಶಗಳಲ್ಲಿ ಪ್ರಾಕೃತಿಕ ಅಪಾಯಗಳು, ಜಾಗತಿಕ ತಾಪಮಾನ ಏರಿಕೆ ಕಾರಣದಿಂದ ಸಮುದ್ರ ಮಟ್ಟ ಏರಿಕೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳನ್ನು ಆಧರಿಸಿ ಊರ್ಜಿತವಾಗುವ ರೀತಿಯಲ್ಲಿ ಅಭಿವೃದ್ಧಿಯನ್ನು ಉತ್ತೇಜಿಸುವುದು.''

ಮೀನುಗಾರ ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು 2011ರ ಅಧಿ ಸೂಚನೆಯಲ್ಲಿ ಈ ಮುಂದಿನ ಉಪಬಂಧಗಳನ್ನು ಕಲ್ಪಿಸಿದೆ.

(i) ಈ ಮುಂದಿನ ವಿಷಯಗಳಿಗಾಗಿ ಕರಾವಳಿ ನಿಯಂತ್ರಣ ವಲಯ ಪ್ರದೇಶದಡಿ 12 ನಾಟಿಕಲ್ ಮೈಲಿಗಳವರೆಗಿನ ಜಲ ಪ್ರದೇಶ ಮತ್ತು ಉಬ್ಬರ ವಿಳಿತ ಪ್ರಭಾವಿತ ಜಲನಿಕಾಯಗಳನ್ನು ಸೇರಿಸಲಾಗಿದೆ.

- ಸಂಸ್ಕರಿಸಿರದ ಒಳಚರಂಡಿ ನೀರನ್ನು, ಕಾರ್ಖಾನೆ ಕೊಳೆ ನೀರನ್ನು ಒಳ ಬಿಡುವುದನ್ನು ಮತ್ತು ಘನ ತ್ಯಾಜ್ಯವನ್ನು ಸುರಿಯುವುದನ್ನು ನಿಯಂತ್ರಿಸುವುದು. ಏಕೆಂದರೆ ಅಂಥ ಚಟುವಟಿಕೆಯು ಮೀನುಗಳು ಮತ್ತು ಅವುಗಳ ಜೀವಿ ಪರಿಸರ ವ್ಯವಸ್ಥೆಯನ್ನು ಹಾಳು ಮಾಡುತ್ತದೆ.
- ಮೀನುಗಳ ಮೊಟ್ಟೆ ಮರಿಯಾಗುವುದು, ಮರಿಸಾಕಣೆ ಮತ್ತು ಅವು ಬೆಳೆಯುವ ತಾಣವಾಗಿ ಮತ್ತು ಮೀನುಗಾರಿಕೆಗೆ ನೆರವಾಗುವ ಹವಳಗಳು ಮತ್ತು ಹವಳ ದ್ವೀಪಗಳು, ಹಾಗೂ ಅಲ್ಲಿನ ಜೀವಿ ವೈವಿಧ್ಯ, ಕಡಲ ಅಭಯಾರಣ್ಯಗಳು ಮತ್ತು ಜೀವಾವರಣ

ಮೀಸಲುಗಳು, ಸಮುದ್ರ ಹುಲ್ಲು ಪಾತಿಗಳು ಮುಂತಾದ ಕಡಲ ಪ್ರದೇಶದಲ್ಲಿನ ಜೀವಾವಾಸಗಳ ಸಂರಕ್ಷಣೆ ಮತ್ತು ಕಾಪಾಡುವಿಕೆ.

- ಸಮುದ್ರದಿಂದ ಭೂ ಪ್ರದೇಶ ಮತ್ತೆ ಪಡೆಯುವುದೂ ಸೇರಿದಂತೆ ಹೂಳು ತೆಗೆಯುವುದು, ಮರಳು ಗಣಿಗಾರಿಕೆ, ಹಡಗುಗಳ ವ್ಯರ್ಥ ಪದಾರ್ಥವನ್ನು ಸಮುದ್ರದಲ್ಲಿ ಬಿಡುವುದು ಗ್ರೋಯಿನ್‌ಗಳು ಮತ್ತು ತಡೆಗೋಡೆಗಳ ನಿರ್ಮಾಣ ಮುಂತಾದ ಮೀನುಗಾರಿಕೆ ಹಾಗೂ ತತ್ಸಂಬಂಧದ ಚಟುವಟಿಕೆಗಳನ್ನು ಕಡಲು ಮತ್ತು ಕರಾವಳಿ ನೀರಿನಲ್ಲಿ ಮಾಡುವುದನ್ನು ನಿಯಂತ್ರಿಸುವುದು.
- ಮೀನುಗಾರ ಸಮುದಾಯಗಳ ಜೀವನೋಪಾಯ ಮತ್ತು ಆಸ್ತಿಪಾಸ್ತಿಗಳ ಮೇಲೆ ಗಂಭೀರ ಪರಿಣಾಮ ಬೀರುವ ಹವಾಮಾನ ಬದಲಾವಣೆ ಮತ್ತು ವಿಕೋಪಗಳ ಸಂಭವ ಕುರಿತು ಕರಾವಳಿ ಮತ್ತು ಕಡಲ ತೀರಗಳ ಅಧ್ಯಯನವನ್ನು ಸಾಧ್ಯಗೊಳಿಸುವುದು.

ಈ ಪ್ರದೇಶದಲ್ಲಿ ಪರಂಪರಾಗತ ಮೀನುಗಾರ ಸಮುದಾಯಗಳು ಯಾವುದೇ ಮೀನುಗಾರಿಕೆಯು ಮತ್ತು ತತ್ಸಂಬಂಧ ಚಟುವಟಿಕೆಗಳನ್ನು ನಡೆಸುವುದರ ಮೇಲೆ ಯಾವ ನಿರ್ಬಂಧವನ್ನು ವಿಧಿಸಿಲ್ಲ ಎಂಬುದನ್ನು ಗಮನಿಸತಕ್ಕದ್ದು.

(ii) ದೇಶದ ಕರಾವಳಿ ತೀರಗಳಲ್ಲಿ ಮಾನವಕೃತ ಚಟುವಟಿಕೆಗಳಿಂದಲೇ ಪ್ರಧಾನವಾಗಿ ಉಂಟಾದ ಭೂ ಕೊರೆತದಿಂದ ಮೀನುಗಾರರು ಮತ್ತವರ ವಾಸ ಗೃಹಗಳು ಅಪಾಯಕ್ಕೀಡಾಗುತ್ತದೆ. ಕರಾವಳಿ ಪ್ರದೇಶವನ್ನು ಹೆಚ್ಚು ಕೊರೆತಕ್ಕೀಡಾಗುವ ವರ್ಗ, ಮಧ್ಯಮ ಕೊರೆತಕ್ಕೀಡಾಗುವ ವರ್ಗ ಅಥವಾ ಸ್ಥಿರ ನಿವೇಶನ ವರ್ಗ ಎಂಬ ವಿವಿಧ ವರ್ಗಗಳಲ್ಲಿ ಯಾವ ಪ್ರದೇಶದಲ್ಲಿ ಬರುತ್ತದೆ ಎಂಬುದನ್ನು ಗುರುತಿಸಿ ಅದರ ಎಲ್ಲೆ ಗುರುತು ಹಾಕಿ ಅಂಥ ಮಾನವ ಕೃತ ಮುಂಗರೆ ಚಟುವಟಿಕೆಗಳ ಅಭಿವೃದ್ಧಿಯನ್ನು ನಿಯಂತ್ರಿಸತಕ್ಕದ್ದು.

(iii) ಕರಾವಳಿ ವಲಯ ನಿರ್ವಹಣಾ ಯೋಜನೆಗಳನ್ನು ತಯಾರಿಸುವಾಗ ಮೀನುಗಾರ ಸಮುದಾಯಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಸ್ಪಷ್ಟವಾಗಿ ಗುರುತು ಮಾಡತಕ್ಕದ್ದು ಹಾಗೆಯೇ ಜಲ ನಿಕಾಯಗಳ ಮೀನುಗಾರಿಕೆ ವಲಯ ಮತ್ತು ಮೀನು ಸಂತತಿ ಸಂವಹನಾ ಪ್ರದೇಶಗಳನ್ನು ಸಹ ಸ್ಪಷ್ಟವಾಗಿ ಗುರುತಿಸತಕ್ಕದ್ದು.

(iv) 2011ರ ಅಧಿಸೂಚನೆಯು ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳು ಕರಾವಳಿ ವಲಯ ನಿರ್ವಹಣಾ ಯೋಜನೆಯ ಕರಡು ಪತ್ರದ ಬಗ್ಗೆ ಎಲ್ಲ ಹಿತಾಸಕ್ತಿ ದಾರರಿಂದ ಟೀಕೆ ಟಿಪ್ಪಣಿಗಳನ್ನು ಆಹ್ವಾನಿಸಬೇಕೆಂದು ಅಗತ್ಯಪಡಿಸುತ್ತದೆ. ಇದರಿಂದ ಮೊತ್ತ ಮೊದಲಬಾರಿಗೆ CZMPಗಳ ತಯಾರಿಕೆಯಲ್ಲಿ ಸ್ಥಳೀಯ ಸಮುದಾಯಗಳು, ಮೀನುಗಾರ ಸಮುದಾಯ ಗಳು ತಮ್ಮ ಅಭಿಪ್ರಾಯಗಳನ್ನು ದಾಖಲಿಸಬಹುದಾಗಿದೆ.

(v) ಈ ಅಧಿಸೂಚನೆಯು ಸ್ಥಳೀಯ ಮೀನುಗಾರ ಸಮುದಾಯದ ಮೂಲ ಸೌಕರ್ಯಗಳನ್ನು CRZ-III ಪ್ರದೇಶದಲ್ಲಿ ನಿರ್ಮಿಸಲು ಅವಕಾಶ ನೀಡುತ್ತದೆ.

(vi) ಸ್ಥಳೀಯ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿಯಮಗಳ ಪ್ರಕಾರ, ಮೀನುಗಾರರೂ ಸೇರಿದಂತೆ ಸ್ಥಳೀಯ ಸಮುದಾಯಗಳು ವಾಸದ ಮನೆಗಳ ಮರು ನಿರ್ಮಾಣ, ರಿಪೇರಿ ಕೆಲಸವನ್ನು ಮಾಡಲು ಅವಕಾಶ ನೀಡಲಾಗುತ್ತದೆ.

(vii) 0–200 ಮೀಟರುಗಳವರೆಗೆ ಅಭಿವೃದ್ಧಿ ನಿಷಿದ್ಧ ವಲಯ (NDZ) ಇರುವ CRZ-III ಪ್ರದೇಶಗಳಲ್ಲಿ ಪರಂಪರಾಗತ ಮೀನುಗಾರರೂ ಸೇರಿದಂತೆ ಕರಾವಳಿ ಸಮುದಾಯಗಳ ವಾಸ ಗೃಹದ ಅಗತ್ಯತೆಗಳನ್ನು ಪೂರೈಸಲು NDZ ಮಿತಿಯನ್ನು 100 ಮೀಟರ್‌ನಷ್ಟು ಕಡಿಮೆ ಮಾಡಲಾಗಿದೆ. ಆದುದರಿಂದ ಅಂಥ ಸಮುದಾಯಗಳ ವಾಸ ಗೃಹವನ್ನು ಉಬ್ಬರ ರೇಖೆಯಿಂದ 100 ಮೀಟರ್‌ನಿಂದ 200 ಮೀಟರುಗಳ ವರೆಗೆ ಇರುವ ಪ್ರದೇಶದಲ್ಲಿ ಸಮುದ್ರ ಮುಖವಾಗಿ ರಾಜ್ಯ ಸರ್ಕಾರ ಮತ್ತು ಅರಣ್ಯ ಮತ್ತು ಪರಿಸರ ಮಂತ್ರಾಲಯದ ಅನುಮೋದನೆಯೊಂದಿಗೆ ಕಟ್ಟಬಹುದು.

**2. ಮೀನುಗಾರ ಸಮುದಾಯಕ್ಕಾಗಿ 2011ರ ಅಧಿಸೂಚನೆಯಲ್ಲಿ ಯಾವ ರಾಜ್ಯ-ನಿರ್ದಿಷ್ಟ ಉಪಬಂಧಗಳನ್ನು ಮಾಡಲಾಗಿದೆ?**

ಮಹಾರಾಷ್ಟ್ರ, ಗೋವ, ಕೇರಳ, ಸುಂದರ ಬನ ಮತ್ತಿತರ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮೀನುಗಾರ ಸಮುದಾಯಕ್ಕಾಗಿ ವಿಶೇಷ ಉಪಬಂಧಗಳನ್ನು ಸಹ ಸೇರಿಸಲಾಗಿದೆ.

- **ಬೃಹತ್ ಮುಂಬೈ:** ಬೃಹತ್ ಮುಂಬೈ ನಿವಾಸಿಗಳಾದ (ಕೋಳಿವಾಡ ಎಂದು ಕರೆಯಲಾಗುವ) ಪರಂಪರಾಗತ ಮೀನುಗಾರರ ಸಮುದಾಯಕ್ಕಾಗಿಯೇ ಒಂದು ಉಪಬಂಧವನ್ನು ಮಾಡಲಾಗಿದೆ. ಇದರಲ್ಲಿ ಸಂಬಂಧಪಟ್ಟ ಪ್ರದೇಶದಲ್ಲಿ ನಕಾಶೆ ತಯಾರಿಸಿ ಅದನ್ನು CRZ-III ಎಂದು ಘೋಷಿಸಲಾಗುವುದು ಮತ್ತು ಸ್ಥಳೀಯ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿಯಮಗಳ ಪ್ರಕಾರ ಇಲ್ಲಿ ನಿರ್ಮಾಣ ಮತ್ತು ಮರು ನಿರ್ಮಾಣವೂ ಸೇರಿದಂತೆ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು.

- **ಗೋವಾ:** ಗೋವಾ ಸರ್ಕಾರವು ಗೋವಾ ಕಡಲ ತೀರದುದ್ದಕ್ಕೂ ವಾಸಿಸುತ್ತಿರುವ ಮೀನುಗಾರರ ಹಳ್ಳಿಗಳ ಸಮೀಕ್ಷೆ ಮಾಡಿ ಅದರ ನಕಾಶೆ ತಯಾರಿಸತಕ್ಕದ್ದು ಮತ್ತು ಮೀನುಗಾರಿಕೆ ಮತ್ತು ತತ್ಸಂಬಂಧದ ಚಟುವಟಿಕೆಗಳಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸತಕ್ಕದ್ದು. 1991ರ CRZ ಅಧಿಸೂಚನೆ ಪ್ರಕಾರ ಅಧಿಕಾರಿಗಳಿಂದ ಅಗತ್ಯ ಅನುಮತಿ ಪಡೆಯದೇ ತಮ್ಮ ವಾಸದ ಮನೆಗಳ ವಿಸ್ತರಣೆ, ಮರು ನಿರ್ಮಾಣ, ರಿಪೇರಿಯನ್ನು CRZ ಪ್ರದೇಶದ ಸ್ಥಳೀಯ ಸಮುದಾಯದವರು ಮಾಡಿದರೆ ಅದನ್ನು ಅಧಿಸೂಚನೆಯ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತಿತ್ತು. ಅಂಥ ಘಟಕಗಳನ್ನು (ಸರಿಸುಮಾರು 5000) ಒಡೆದು ಹಾಕಬೇಕೆಂದು ಬಾಂಬೆಯ ಸನ್ಮಾನ್ಯ ಉಚ್ಚನ್ಯಾಯಾಲಯವು ಆದೇಶಿಸಿದೆ. ಹೀಗಿದ್ದಾಗೂ 2011ರ ಅಧಿಸೂಚನೆಯಲ್ಲಿ CRZ

ಪ್ರದೇಶಗಳಲ್ಲಿ ಸ್ಥಳೀಯರು ತಮ್ಮ ಕಟ್ಟಡಗಳ ಮರು ನಿರ್ಮಾಣ ಹಾಗೂ ರಿಪೇರಿ ಮಾಡಲು ಅವಕಾಶ ಕಲ್ಪಿಸಿದೆ.

- **ಕೇರಳ:** ಕೇರಳದ CRZ ಪ್ರದೇಶವನ್ನು ಉಬ್ಬರ ರೇಖೆಯಿಂದ ಭೂಮಿಯ ತಡೆಗೆ 50 ಮೀಟರ್‌ಗಳ ಮಟ್ಟಿಗೆ ಕಡಿಮೆ ಮಾಡಲಾಗಿದೆ. ಈ ಪ್ರದೇಶವು ಅಭಿವೃದ್ಧಿ ನಿಷಿದ್ಧ ವಲಯವಾಗಿದ್ದು ಯಾವುದೇ ಹೊಸ ನಿರ್ಮಾಣವನ್ನೂ ಇಲ್ಲಿ ಮಾಡುವಂತಿಲ್ಲ. ಹೀಗಿದ್ದರೂ ಈ ಪ್ರದೇಶದೊಳಗೆ ಬರುವ ಸ್ಥಳೀಯ ಸಮುದಾಯಗಳ ವಸತಿ ಗೃಹಗಳನ್ನು ರಿಪೇರಿ ಮಾಡಬಹುದು ಮತ್ತು ಮರು ನಿರ್ಮಾಣ ಮಾಡಬಹುದು. ಅವಶ್ಯ ಮುಂಗರೆ ಸೌಲಭ್ಯಗಳಾದ ಮೀನುಗಾರಿಕೆ ಜೆಟ್ಟಿ, ಮೀನು ಒಣಗಿಸುವ ಅಂಗಳ, ಬಲೆ ರಿಪೇರಿ ಅಂಗಳ, ಸಾಂಪ್ರದಾಯಿಕ ಪದ್ಧತಿ ಪ್ರಕಾರ ಮೀನು ಸಂಸ್ಕರಣೆ, ದೋಣಿ ನಿರ್ಮಾಣ ಅಂಗಳಗಳು, ಮಂಜುಗೆಡ್ಡೆ ಸ್ಥಾವರಗಳು, ದೋಣಿ ರಿಪೇರಿ ಅಂಗಳ ಇತ್ಯಾದಿ ಸೌಲಭ್ಯ ಒದಗಿಸುವುದು ಇವನ್ನು 0-50 ಮೀಟರು ಪ್ರದೇಶದಲ್ಲಿ ನಿರ್ಮಿಸಬಹುದು. ಉಬ್ಬರ ರೇಖೆಯಿಂದ 50 ಮೀಟರು ದಾಟಿ ಭೂಮಿ ಕಡೆಯ ಭಾಗದಲ್ಲಿ ಸ್ಥಳೀಯ ಸಮುದಾಯಗಳ ವಾಸ ಗೃಹಗಳನ್ನು ಸ್ಥಳೀಯ ಪಂಚಾಯಿತಿಗಳ ಅನುಮತಿಯೊಂದಿಗೆ ನಿರ್ಮಿಸಬಹುದು.

- **ಸುಂದರಬನ:** ಸುಂದರಬನ ಮತ್ತಿತರ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶಗಳಲ್ಲಿ ಅಭಿವೃದ್ಧಿಯನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಸ್ಥಳೀಯ ಸಮುದಾಯಗಳ ಪ್ರಯೋಜನಕ್ಕಾಗಿ ಈ ಪ್ರದೇಶಗಳ ಸಂರಕ್ಷಣೆ ಮತ್ತು ಕಾಪಾಡುವಿಕೆ ಬಗ್ಗೆ ಈ ಸಮುದಾಯಗಳೊಂದಿಗೆ ಸಮಾಲೋಚಿಸಿ ಒಂದು ಸಮಗ್ರ ನಿರ್ವಹಣಾ ಯೋಜನೆಯನ್ನು (IMP) ತಯಾರಿಸಬೇಕು. ಸದರಿ IMPಯಲ್ಲಿ ಅಂಥ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶದಲ್ಲಿ ವಾಸಿಸುವ ಮೀನುಗಾರರೂ ಸೇರಿದಂತೆ ಸ್ಥಳೀಯ ಸಮುದಾಯಗಳ ಗೃಹ ನಿರ್ಮಾಣ ಅಗತ್ಯಗಳ ಪೂರೈಕೆ ಕುರಿತು ಗಮನ ಹರಿಸಬೇಕು.

## IV. ಮಾಲಿನ್ಯದ ವಿರುದ್ಧ ಹೋರಾಡಲು ಕ್ರಮಗಳು

**1. ಕರಾವಳಿ ಪ್ರದೇಶಗಳಲ್ಲಿ / ಕರಾವಳಿ ಜಲ ಪ್ರದೇಶದಲ್ಲಿ, ಮಾಲಿನ್ಯ ನಿಯಂತ್ರಿಸಲು 2011ರ ಅಧಿಸೂಚನೆಯಲ್ಲಿ ಮಾಡಿರುವ ಏರ್ಪಾಟುಗಳೇನು?**

ಕರಾವಳಿ ಪ್ರದೇಶಗಳು / ಕರಾವಳಿ ಜಲ ಪ್ರದೇಶದಲ್ಲಿ ಮಾಲಿನ್ಯವನ್ನು ತಡೆಯಲು ಕೈಗೊಳ್ಳತಕ್ಕ ಕೆಲವೊಂದು ಕ್ರಮಗಳನ್ನು 2011ರ ಅಧಿಸೂಚನೆಯಲ್ಲಿ ಪಟ್ಟಿಮಾಡಲಾಗಿದೆ. ಕಸ ಮತ್ತು ಕೊಳೆ ನೀರನ್ನು ಕಡಲ ತೀರದ ನೀರಿನಲ್ಲಿ ಬಿಡುವುದನ್ನು ನಿಷೇಧಿಸಲಾಗಿದೆ. ಎಲ್ಲ ಕಡಲ ತೀರವಿರುವ ರಾಜ್ಯಗಳು ಈ ಮುಂದಿನ ಕ್ರಮಗಳು ಆಗುವಂತೆ ನೋಡಿಕೊಳ್ಳಬೇಕು.

- ಈಗ ಚಾಲ್ತಿಯಲ್ಲಿರುವ ಪರಿಷ್ಕರಿಸದ ಕಸ ಮತ್ತು ಕೊಳೆ ನೀರನ್ನು ಸಮುದ್ರದೊಳಕ್ಕೆ ಬಿಡುವ ಪದ್ಧತಿಯನ್ನು ಎರಡು ವರ್ಷಗಳನ್ನು ಮೀರದ ಅವಧಿಯ ಒಳಗೆ ಹಂತ ಹಂತವಾಗಿ ಕಡಿಮೆ ಮಾಡಿ ನಿಲ್ಲಿಸುವಂತೆ ಮಾಡತಕ್ಕದ್ದು.
- ಅಧಿಸೂಚನೆಯ ಪ್ರಾರಂಭದಿಂದ ಒಂದು ವರ್ಷದ ಒಳಗೆ ಘನ ತ್ಯಾಜ್ಯ ವಸ್ತುವನ್ನು ತಂದು ಸುರಿಯುವುದನ್ನು ಹಂತ ಹಂತವಾಗಿ ಕಡಿಮೆ ಮಾಡಿ ನಿಲ್ಲಿಸತಕ್ಕದ್ದು.
- ಕಾಲಬದ್ಧ ರೀತಿಯಲ್ಲಿ ಕರಾವಳಿ ಪ್ರದೇಶದಲ್ಲಿ ಮತ್ತು ಕರಾವಳಿ ಜಲ ಪ್ರದೇಶದಲ್ಲಿ ಮಾಲಿನ್ಯ ತಡೆಯಲು ಒಂದು ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು.
- ಈ ಕ್ರಿಯಾಯೋಜನೆಯನ್ನು ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಸಲ್ಲಿಸಿ ಅವರಿಂದ ತಾಂತ್ರಿಕ ಮತ್ತು ಹಣಕಾಸು ನೆರವು ಪಡೆಯತಕ್ಕದ್ದು.

## V. ತೀರ್ವಳಿ ಪ್ರಕ್ರಿಯೆ

**1. 2011ರ ಅಧಿಸೂಚನೆಯಲ್ಲಿ ನಿಗದಿ ಪಡಿಸಿರುವ ತೀರ್ವಳಿ ಕಾರ್ಯವಿಧಾನ ಏನು?**

1991ರ ಅಧಿಸೂಚನೆಯಲ್ಲಿ CRZ ನ ತೀರ್ವಳಿಗಾಗಿ ಏನು ಕ್ರಮ ಅನುಸರಿಸಬೇಕೆಂದು ಹೇಳಿಲ್ಲ, ಆದರೆ 2011ರ ಅಧಿಸೂಚನೆಯಲ್ಲಿ ಅಂಥ ತೀರ್ವಳಿ ಪಡೆಯಲು ಒಂದು ನಿರ್ದಿಷ್ಟ ಪ್ರಕ್ರಿಯೆಯನ್ನು ಒದಗಿಸಲಾಗಿದೆ. ಈ ಪ್ರಕ್ರಿಯೆ ಈ ಮುಂದಿನಂತಿದೆ.

(i) ಯೋಜನಾ ಪ್ರಾಧಿಕಾರಿಗಳು ತಮ್ಮ ಪ್ರಸ್ತಾವಗಳನ್ನು ಸಂಬಂಧಪಟ್ಟ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ CZMAಗಳಿಗೆ ಈ ಮುಂದಿನ ದಾಖಲೆಗಳು, ವರದಿಗಳೊಂದಿಗೆ ಸಲ್ಲಿಸತಕ್ಕದ್ದು.

- ನಮೂನೆ I (ಅಧಿಸೂಚನೆಯ ಅನುಬಂಧ IV);
- ಪರಿಸರದ ಮೇಲಿನ ಪರಿಣಾಮ ಕುರಿತ ತ್ವರಿತ ನಿರ್ಧರಣೆ (EIA) ವರದಿಯನ್ನು, ಪರಿಸರ ಮತ್ತು ಅರಣ್ಯ ಮಂತ್ರಾಲಯವು ಕಾಲದಿಂದ ಕಾಲಕ್ಕೆ ನೀಡಿದ ಮಾರ್ಗದರ್ಶಿಕೆಗಳ ಪ್ರಕಾರ ಕಡಲು ಮತ್ತು ಭೂಮಿ EIA, ವ್ಯಾಪಕ EIA ಮತ್ತು ಬಂದರು ಹಾಗೂ ಮುಂಗರೆಗೆ ಅಗತ್ಯವಾದ ಯೋಜನೆಗಳ ಸಂಚಿತ ಅಧ್ಯಯನಗಳ ಜೊತೆಯಲ್ಲಿ ಸಲ್ಲಿಸತಕ್ಕದ್ದು;
- ಮಹಾವಿಕೋಪ ನಿರ್ವಹಣಾ ವರದಿ ಮತ್ತು ಅಪಾಯ ಸಂಭವ ನಿರ್ವಹಣಾ ವರದಿ;
- ಪ್ರಾಧಿಕೃತ ಏಜನ್ಸಿಯು ಗಡಿ ರೇಖಿಸಿದ ಉಬ್ಬರ ರೇಖೆ ಮತ್ತು ಇಳಿತ ರೇಖೆಗಳನ್ನು ಸೂಚಿಸುವ (1:4000 ಅಳತೆಯ) CRZ ನಕಾಶೆ.
- ಮೇಲೆ ಹೇಳಿದ ನಕಾಶೆ ಮೇಲೆ ರೇಖಿಸಿರುವ ಯೋಜನಾ ವಿನ್ಯಾಸ.

- CRZ ನಕಾಶೆಯು ಸಾಮಾನ್ಯವಾಗಿ ಯೋಜನಾ ನಿವೇಶನದ ಸುತ್ತಲು 2 ಕಿಲೋಮೀಟರ್ ತ್ರಿಜ್ಯವನ್ನು ಸೂಚಿಸತಕ್ಕದ್ದು.
- CRZ ನಕಾಶೆಯಲ್ಲಿ CRZ-I, II, III ಮತ್ತು IVರ ಪ್ರದೇಶಗಳನ್ನು ತೋರಿಸತಕ್ಕದ್ದು.
- ಕೊಳೆ ನೀರು, ಘನತ್ಯಾಜ್ಯ, ಒಳ ಚರಂಡಿ ನೀರು ಮುಂತಾದವುಗಳನ್ನು ವಿಸರ್ಜಿಸುವ ಉದ್ದೇಶವುಳ್ಳ ಯೋಜನೆಗಳಿಗೆ ಸಂಬಂಧಪಟ್ಟ ಮಾಲಿನ್ಯ ನಿಯಂತ್ರಣ ಮಂಡಳಿಗಳು ಅಥವಾ ಸಮಿತಿಗಳಿಂದ ನೀಡಿರುವ ನಿರಾಕ್ಷೇಪಣ ಪತ್ರ (ಕರಾವಳಿ ನೀರಿನಲ್ಲಿ ಮಾಲಿನ್ಯವನ್ನು ಆದಷ್ಟು ಕಡಿಮೆ ಮಾಡುವ ಉದ್ದೇಶದಿಂದ ಮಾಲಿನ್ಯ ನಿಯಂತ್ರಣ ಮಂಡಳಿಗಳು ಅಥವಾ ಸಮಿತಿಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕೆಂದು ಕಡ್ಡಾಯ ಪಡಿಸಲಾಗಿದೆ.)

(ii) ಸಂಬಂಧಪಟ್ಟ CZMA ಅವರು ಅನುಮೋದಿತ CZMP ಮತ್ತು CRZ ಅಧಿಸೂಚನೆಗೆ ಅನುಗುಣವಾಗಿ ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಿ ನೋಡತಕ್ಕದ್ದು. ಮತ್ತು ಸದರಿ ದಾಖಲೆಯನ್ನು ಸ್ವೀಕರಿಸಿದ ಅರವತ್ತು ದಿನಗಳ ಅವಧಿಯ ಒಳಗೆ ಸೂಕ್ತ ಶಿಫಾರಸ್ಸನ್ನು ಈ ಮುಂದಿನವರಿಗೆ ಮಾಡತಕ್ಕದ್ದು.

- EIA ಅಧಿಸೂಚನೆ 2006ರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳ ಸಂದರ್ಭದಲ್ಲಿ SEAC ಅಥವಾ EACಗೆ.
- CRZ ಅಧಿಸೂಚನೆ ವ್ಯಾಪ್ತಿಯಲ್ಲಿ ಬರುವ ಯೋಜನೆಯ ಸಂದರ್ಭದಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯ ಅಥವಾ ರಾಜ್ಯ ಸರ್ಕಾರ.

(iii) ಪರಿಸರ ಮತ್ತು ಅರಣ್ಯ ಮಂತ್ರಾಲಯವು ಅರವತ್ತು ದಿನಗಳ ಒಳಗೆ ಸಂಬಂಧಪಟ್ಟ CZMA ಶಿಫಾರಸ್ಸುಗಳನ್ನು ಆಧರಿಸಿ ಅಂಥ ಯೋಜನೆಗಳನ್ನು ಪರಿಶೀಲಿಸಿ ನೋಡತಕ್ಕದ್ದು.

**2. ಈ ತೀರ್ವಳಿ ಅನುಮೋದನೆ ಎಷ್ಟು ಕಾಲದವರೆಗೆ ಸಿಂಧುವಾಗಿರುತ್ತದೆ?**

2011ರ ಅಧಿಸೂಚನೆ ಅಡಿಯಲ್ಲಿ ಯೋಜನೆಗಳಿಗೆ ನೀಡಿದ ತೀರ್ವಳಿ ಅನುಮೋದನೆಯ ಅಂಥ ಅನುಮೋದನೆ ನೀಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯ ವರೆಗೆ ಮಾನ್ಯವಾಗಿರುತ್ತದೆ.

**3. ತೀರ್ವಳಿ ಅನುಮೋದನೆ ನೀಡಿದ ತರುವಾಯ ಮೇಲ್ವಿಚಾರಣಾ ಕಾರ್ಯಯಂತ್ರ ಏನಿದೆ?**

2011ರ ಅಧಿಸೂಚನೆ ಅಡಿಯಲ್ಲಿನ ಯೋಜನೆಗಳಿಗೆ ತೀರ್ವಳಿ ಅನುಮೋದನೆ ನೀಡಿದ ತರುವಾಯ ಕೂಡಲೇ ಈ ಮುಂಚಿನ ತೀರ್ವಳಿ ತರುವಾಯದ ಕಾರ್ಯಯಂತ್ರದ ಕೆಲಸ ಪ್ರಾರಂಭವಾಗುತ್ತದೆ.

- ಯೋಜನೆಯ ಆಡಳಿತ ವರ್ಗದವರು ಕಡ್ಡಾಯವಾಗಿ ಪರಿಸರ ಕುರಿತ ತೀರ್ವಳಿ ಅನುಮೋದನೆ ನೀಡಲು ನಿಗದಿ ಪಡಿಸಿದ ನಿಬಂಧನೆ ಮತ್ತು ಷರತ್ತುಗಳ ಸಂಬಂಧದಲ್ಲಿ

ಅರ್ಧವಾರ್ಷಿಕ ಪರಿಪಾಲನಾ ವರದಿಗಳನ್ನು ಕಾಗದ ಮುದ್ರಿತ ಪ್ರತಿ ಮತ್ತು ತಂತ್ರಾಂಶ ಪ್ರತಿಗಳಲ್ಲಿ ಸಂಬಂಧಪಟ್ಟ ನಿಯಂತ್ರಕ ಪ್ರಾಧಿಕಾರಕ್ಕೆ ಪ್ರತಿ ಕ್ಯಾಲೆಂಡರು ವರ್ಷದ 1ನೇ ಜೂನ್ ಮತ್ತು 31ನೇ ಡಿಸೆಂಬರ್‌ನಲ್ಲಿ ಸಲ್ಲಿಸಬೇಕು.

- ಯೋಜನೆಯ ಆಡಳಿತ ವರ್ಗದವರು ಸಲ್ಲಿಸಿದ ಪರಿಪಾಲನಾ ವರದಿಗಳೆಲ್ಲಾ ಸಾರ್ವಜನಿಕ ದಾಖಲೆಗಳಾಗಿರತಕ್ಕದ್ದು.
- ಸಂಬಂಧಪಟ್ಟ ನಿಯಂತ್ರಕ ಪ್ರಾಧಿಕಾರಕ್ಕೆ ಯಾರಾದರೂ ಅರ್ಜಿ ಸಲ್ಲಿಸಿದರೆ ಅದರ ಪ್ರತಿಗಳನ್ನು ಆ ವ್ಯಕ್ತಿಗೆ ನೀಡತಕ್ಕದ್ದು.
- ಇತ್ತೀಚಿಗಿನ ಪರಿಪಾಲನಾ ವರದಿಯನ್ನು ಸಂಬಂಧಪಟ್ಟ ನಿಯಂತ್ರಕ ಪ್ರಾಧಿಕಾರದ ಅಂತರ್ಜಾಲದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದು ತೀರ್ವಾಳಿ ಅನುಮೋದನೆ ನೀಡಿದ ದಿನಾಂಕದಿಂದ ಐದು ವರ್ಷಗಳ ಕಾಲ ಮಾನ್ಯವಾಗಿರುತ್ತದೆ.

## VI. ಅಮಲುಜಾರಿ ಕ್ರಮಗಳು

**1. 2011ರ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಅಮಲುಜಾರಿ ಕಾರ್ಯತಂತ್ರವೇನು?**

CRZ ಅಧಿಸೂಚನೆ 1991ರಲ್ಲಿ ಯಾವುದೇ ಅಮಲು ಜಾರಿ ಕಾರ್ಯತಂತ್ರವನ್ನು ಸೂಚಿಸಿರಲಿಲ್ಲ, ಇದು ಈ ಅಧಿಸೂಚನೆಯ ಒಂದು ಬಲು ದೊಡ್ಡ ನ್ಯೂನತೆಯಾಗಿತ್ತು ಮತ್ತು ಇದೇ ಬಹಳಷ್ಟು ಉಲ್ಲಂಘನೆಗೆ ಪ್ರಮುಖ ಕಾರಣವಾಗಿತ್ತು. 2011ರ CRZ ಅಧಿ ಸೂಚನೆಯು ಅಧಿಸೂಚನೆಯ ಯಾವುದೇ ಉಲ್ಲಂಘನೆಯನ್ನು ಕುರಿತು ಕ್ರಮವನ್ನು ಯಾವ ರೀತಿಯಲ್ಲಿ ಮತ್ತು ಎಷ್ಟು ಕಾಲದೊಳಗೆ ತೆಗೆದುಕೊಳ್ಳಬೇಕೆಂದು ತಿಳಿಸುತ್ತದೆ. ರಾಜ್ಯ ಮಟ್ಟಗಳಲ್ಲಿ CZMAಗಳು ಮತ್ತು ಕೇಂದ್ರ ಮಟ್ಟದಲ್ಲಿ NCZMAಗಳನ್ನು ಕಾಲಬದ್ಧ ರೀತಿಯಲ್ಲಿ ಬಲಪಡಿಸತಕ್ಕದ್ದು ಮತ್ತು ಅದರ ಸಾಮರ್ಥ್ಯಗಳನ್ನು ಅಧಿಸೂಚನೆಯನ್ನು ಪರಿಣಾಮಕಾರಿಯಾಗಿ ಜಾರಿ ತರಲು ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೆಚ್ಚಿಸತಕ್ಕದ್ದು. ಇತ್ತೀಚಿನ ಸೂಕ್ತ ನಕಾಶೆಗಳು ಉಪಗ್ರಹ ಬಿಂಬಗಳು ಮತ್ತು ಮಾಹಿತಿ ತಂತ್ರಜ್ಞಾನಗಳನ್ನು ಬಳಸಿಕೊಂಡು 2011ರ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯ ಒಳಗೆ ಉಲ್ಲಂಘನೆಗಳನ್ನು ಗುರುತಿಸತಕ್ಕದ್ದು ಮತ್ತು ಅವಶ್ಯ ಕ್ರಮಗಳನ್ನು ಆ ತರುವಾಯ ನಾಲ್ಕು ತಿಂಗಳುಗಳ ಅವಧಿಯ ಒಳಗೆ ಪರಿಸರ (ಸಂರಕ್ಷಣಾ) ಕಾಯ್ದೆ 1986ರ ಪ್ರಕಾರ ಪ್ರಾರಂಭಿಸತಕ್ಕದ್ದು.

**2. ಪಾರದರ್ಶಕತೆ ಇರುವಂತೆ ನೋಡಿಕೊಳ್ಳಲು ಯಾವ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗಿದೆ?**

CZMAಗಳ ಕಾರ್ಯ ನಿರ್ವಹಣೆಯಲ್ಲಿ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಲು

ಕರಾವಳಿ ನಿರ್ವಹಣಾ ವಲಯ ಪ್ರಾಧಿಕಾರವು ಒಂದು ಅಂತರ್ಜಾಲವನ್ನು ರಚಿಸಿ ಅಂಥ ಅಂತರ್ಜಾಲದಲ್ಲಿ ಕಾರ್ಯಸೂಚಿಗಳು, ನಡವಳಿಗಳು, ತೆಗೆದುಕೊಂಡ ನಿರ್ಧಾರಗಳು, ತೀರ್ವಳಿ ಪತ್ರಗಳು, ಉಲ್ಲಂಘನೆಗಳು, ತೆಗೆದುಕೊಂಡ ಕ್ರಮಗಳು, ಕೋರ್ಟುಕೇಸುಗಳು ಇತ್ಯಾದಿ ಹಾಗೂ CZMPಗಳೂ ಸೇರಿದಂತೆ ವಿವರಗಳನ್ನು ಪ್ರಕಟಿಸತಕ್ಕದ್ದು. (ಇಂಥ ಉಪಬಂಧಗಳನ್ನು CRZ ಅಧಿಸೂಚನೆ 1991ರಲ್ಲಿ ನೀಡಿರಲಿಲ್ಲ)

## VII. ನಿರ್ದಿಷ್ಟ ಕರಾವಳಿ ಭಾಗಗಳಿಗಾಗಿ ವಿಶೇಷ ಉಪಬಂಧಗಳು

**1. ವಿಶೇಷ ಪರಿಗಣನೆ ನೀಡಬೇಕಾದ ಪ್ರದೇಶಗಳು ಯಾವುವು?**

1991ರ ಅಧಿಸೂಚನೆಯಲ್ಲಿ ಪರಿಸರ ವೈವಿಧ್ಯ, ಸಾಮಾಜಿಕ – ಆರ್ಥಿಕ ಪರಿಸ್ಥಿತಿಗಳು, ಅಭಿವೃದ್ಧಿ ಒತ್ತಡಗಳು ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಇಡೀ ದೇಶದ ಎಲ್ಲಾ ಕರಾವಳಿ ಪ್ರದೇಶಗಳಿಗೂ ಒಂದೇ ಬಗೆಯ ನಿಮಯಗಳನ್ನು ಒದಗಿಸಲಾಗಿತ್ತು. 2011ರ ಅಧಿ ಸೂಚನೆಯಲ್ಲಿ, ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು, ಮುಂಬೈನಲ್ಲಿ ಹಳೆಯ ಶಿಥಿಲ ಮತ್ತು ಅಸುರಕ್ಷಿತ ಗೃಹಗಳಲ್ಲಿ ವಾಸಿಸುತ್ತಿರುವವರು, ಕೇರಳದ ಹಿನ್ನೀರಿನಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು, ಗೋವ ಕರಾವಳಿಯಲ್ಲಿ ವಾಸಿಸುತ್ತಿರುವ ಸ್ಥಳೀಯ ಸಮುದಾಯಗಳು ಮತ್ತು ಸುಂದರಬನದ ಜೀವಿ ಪರಿಸರ ದೃಷ್ಟಿಯಿಂದ ನಾಜೂಕಾದ ಪರಿಸರದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ಮುಂತಾದ ಸ್ಥಳೀಯ ಸಮುದಾಯಗಳು ಎದುರಿಸುತ್ತಿರುವ ವಿವಿಧ ಬಗೆಯ ಸಮಸ್ಯೆಗಳನ್ನು ಗಮನದಲ್ಲಿರಿಸಿ ವಿಶೇಷ ಉಪಬಂಧಗಳನ್ನು ಸೇರಿಸಿದೆ.

**2. ಬೃಹತ್ ಮುಂಬೈಗಾಗಿ ನೀಡಿರುವ ವಿಶೇಷ ಏರ್ಪಾಟುಗಳೇನು?**

ಮುಂಬೈ ಕೆಲವೊಂದು ಅನನ್ಯ ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬುದನ್ನು ಗಮನದಲ್ಲಿರಿಸಿ ಈ ಮುಂದಿನ ಉಪಬಂಧಗಳನ್ನು ರಚಿಸಲಾಗಿದೆ.

**A. CRZ-I ಪ್ರದೇಶಗಳು:**

- ಎಲ್ಲಾ ರಸ್ತೆಗಳು ಮತ್ತು ಜೋಡಣೆ ರಸ್ತೆಗಳನ್ನು ಉಬ್ಬರ ಇಳಿತಗಳ ನೀರು ಸಲೀಸಾಗಿ ಹರಿದು ಹೋಗುವಂತೆ ಊರು ಕಂಬಗಳ ಮೇಲೆ ರಚಿಸತಕ್ಕದ್ದು.
- ಈ ಮೇಲ್ಕಂಡ ನಿರ್ಮಾಣದ ಕಾಲದಲ್ಲಿ ನಾಶಗೊಳಿಸಲಾದ/ಕತ್ತರಿಸಿದ ಕಾಂಡ್ಲ ಕಾಡುಗಳ ಸರಿಸುಮಾರು ಐದರಷ್ಟು ಸಂಖ್ಯೆಯ ಕಾಂಡ್ಲ ಸಸಿಗಳನ್ನು ನೆಡತಕ್ಕದ್ದು.
- ಈ ಅಧಿಸೂಚನೆಯನ್ನು ಹೊರಡಿಸಿದ ಒಂದು ವರ್ಷದ ಒಳಗೆ ಎಲ್ಲಾ ಕಾಂಡ್ಲ ಕಾಡುಗಳ ನಕಾಶೆಯನ್ನು ತಯಾರಿಸತಕ್ಕದ್ದು, ಅದರ ಸಂರಕ್ಷಣೆಗೆ ಕ್ರಮಗಳನ್ನು ಪ್ರಾರಂಭಿಸತಕ್ಕದ್ದು. ಘನತಾಜ್ಯದ ವಿಲೇವಾರಿ ನಿವೇಶನಗಳನ್ನು CRZ ಪ್ರದೇಶದಿಂದ ಹೊರಕ್ಕೆ ಸ್ಥಳಾಂತರಿಸತಕ್ಕದ್ದು. ಮತ್ತು ಅಪಾಯ ರೇಖೆಯಿಂದ ಸಮುದ್ರದ ಕಡೆಗೆ ಇರುವ

ನಿವಾಸಗಳು ಮತ್ತು ನಿರ್ಮಿತಿಗಳನ್ನು ರಕ್ಷಿಸಲು ಒಂದು ಕಾರ್ಯ ಯೋಜನೆಯನ್ನು ಪ್ರಾರಂಭಿಸತಕ್ಕದ್ದು.

**B. CRZ-II ಪ್ರದೇಶ:**

- ರಾಜ್ಯ ಸರ್ಕಾರವು ಯೋಜನೆ ಮಂಜೂರಾಗುವ ದಿನಾಂಕದಂದು ಇರುವಂತೆ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿಯಮಗಳಲ್ಲಿ ನಿರ್ದಿಷ್ಟವಾಗಿ ಹೇಳಿರುವಂತೆ ನೆಲಾವಕಾಶಸೂಚಿ ಅಥವಾ ನೆಲವಿಸ್ತೀರ್ಣ ಸರಾಸರಿಯನ್ನು ಪಾಲಿಸಿ CRZ-IIರ ಪ್ರದೇಶಗಳಲ್ಲಿ ಕೊಳೆಗೇರಿ ಮರು ನಿರ್ಮಾಣ ಯೋಜನೆಗಳನ್ನು ಕೈಗೊಳ್ಳಬಹುದು. ಹೀಗಿದ್ದರೂ ರಾಜ್ಯ ಸರ್ಕಾರಗಳು ಅಥವಾ ಅವುಗಳ ಏಜೆನ್ಸಿಗಳ ಹೂಡಿಕೆಪಾಲು ಈ ಯೋಜನೆಗಳಲ್ಲಿ ಶೇ.51ಕ್ಕಿಂತ ಕಡಿಮೆ ಇರಬಾರದು.
- CRZ-II ಪ್ರದೇಶದ ಹಳೆಯದಾದ, ಶಿಥಿಲವಾದ ಮತ್ತು ಅಸುರಕ್ಷಿತ ಕಟ್ಟಡಗಳ ಮರು ನಿರ್ಮಾಣಕ್ಕೆ ಅವಕಾಶ ನೀಡತಕ್ಕದ್ದು. ಅಂಥ ಎಲ್ಲ ಯೋಜನೆಗಳನ್ನು ಕಟ್ಟಡಗಳ ಮಾಲೀಕರೇ ನೇರವಾಗಿ ಅಥವಾ ಖಾಸಗಿ ಅಭಿವೃದ್ಧಿದಾರರ ಮೂಲಕ ತೆಗೆದುಕೊಳ್ಳತಕ್ಕದ್ದು. ಸದರಿ ಯೋಜನೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡ ದಿನಾಂಕದಿಂದ ಇರುವಂಥ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ನಿಯಮದ ಪ್ರಕಾರ ನಡೆಯತಕ್ಕದ್ದು.
- ಬೃಹತ್ ಮುಂಬೈ ಪ್ರದೇಶದ 'ಹಸಿರು ಉಸಿರು ದಾಣವನ್ನು' ಸಂರಕ್ಷಿಸಲು ಮತ್ತು ಕಾಪಾಡಿಕೊಂಡು ಬರಲು ಅಭಿವೃದ್ಧಿ ಯೋಜನೆಗಳಲ್ಲಿ ಸೂಚಿಸಿದ ಎಲ್ಲ CRZ-IIನಲ್ಲಿರುವ ತೆರೆದ ಪ್ರದೇಶಗಳು, ಪಾರ್ಕುಗಳು, ತೋಟಗಳು, ಆಟದ ಮೈದಾನಗಳನ್ನು CRZ-III ಅಂದರೆ ಅಭಿವೃದ್ಧಿ ನಿಷಿದ್ಧ ಪ್ರದೇಶ ಎಂದು ವರ್ಗೀಕರಿಸತಕ್ಕದ್ದು. ಮನೋರಂಜನಾ ಆಟಗಳಿಗಾಗಿ ನಾಗರಿಕ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ನಿರ್ಮಿಸಲು, ನೆಲ ವಿಸ್ತೀರ್ಣ ಸೂಚ್ಯಂಕ ಶೇ.15 ಇದ್ದರೆ ಮಾತ್ರ ಅನುಮತಿಸತಕ್ಕದ್ದು. ಅಂಥ ಸ್ಥಳಾವಕಾಶಗಳಲ್ಲಿ ನಿವಾಸ ಗೃಹಗಳು ನಿರ್ಮಾಣ ಮತ್ತು ವಾಣಿಜ್ಯ ಬಳಕೆಯನ್ನು ನಿಷೇಧಿಸಲಾಗಿದೆ.
- CRZ-IIರಲ್ಲಿರುವ ಸ್ಥಳೀಯ ಸಮುದಾಯಗಳ ವಾಸಗೃಹಗಳ ಮರು ನಿರ್ಮಾಣ ಮತ್ತು ರಿಪೇರಿ ಕೆಲಸವನ್ನು ಸಕ್ಷಮ ಪ್ರಾಧಿಕಾರಿಗಳು ಆದ್ಯತೆ ಮೇಲೆ ಅನುಮತಿಸತಕ್ಕದ್ದು.
- ಕೋಳಿವಾಡ ಸೇರಿದಂತೆ ಮೀನುಗಾರ ವಸತಿ ಪ್ರದೇಶಗಳು ಮತ್ತು 1981ರ ಅಭಿವೃದ್ಧಿ ಯೋಜನೆಯಲ್ಲಿ ಗುರುತಿಸಲಾದಂತಹವನ್ನು ಅಥವಾ ಮಹಾರಾಷ್ಟ್ರ ಸರ್ಕಾರದ ಸಂಬಂಧಪಟ್ಟ ದಾಖಲೆಗಳಲ್ಲಿ ಗುರುತಿಸಲಾದಂತಹವನ್ನು ನಕಾಶೆಯಾಗಿ ಗುರುತಿಸಿ CRZ-III ಎಂದು ಘೋಷಿಸತಕ್ಕದ್ದು. ಹೀಗೆ ಮಾಡಿ ಈ ನೆಲದಾಣದಲ್ಲಿ ವಾಸದ ಮನೆಗಳ ನಿರ್ಮಾಣ ಮತ್ತು ಮರು ನಿರ್ಮಾಣವೂ ಸೇರಿದಂತೆ ಯಾವುದೇ ಅಭಿವೃದ್ಧಿಯನ್ನು

ಅದಕ್ಕೆ ಅನ್ವಯಿಸುವ ಸ್ಥಳೀಯ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿಯಮಗಳಿಗೆ ಅನುಸಾರವಾಗಿ ತೆಗೆದುಕೊಳ್ಳುವಂತೆ ಮಾಡತಕ್ಕದ್ದು.

**3. ನವಿ ಮುಂಬೈಗಾಗಿ ಮಾಡಲಾದ ಅಂಥ ವಿಶೇಷ ವ್ಯವಸ್ಥೆಯ ಕಾರಣದಿಂದ ಯಾವುದೇ ದುರ್ವ್ಯವಹಾರ ನಡೆಯದಂತೆ ನೋಡಿಕೊಳ್ಳಲು ಯಾವ ಕಾರ್ಯತಂತ್ರವಿದೆ?**

ಮುಂಬೈನ ಕೊಳಗೇರಿ ಹಾಗೂ ಶಿಥಿಲ ಕಟ್ಟಡದ ಮರು ನಿರ್ಮಾಣವು ಅತ್ಯಂತ ಪಾರದರ್ಶಕವಾಗಿ ಮತ್ತು ಉತ್ತರದಾಯಿಯಾಗಿ ನಡೆಯುವಂತೆ ನೋಡಿಕೊಳ್ಳಲು ಈ ಮುಂದಿನ ಕ್ರಮಗಳನ್ನು ನಿಗದಿಪಡಿಸಲಾಗಿದೆ.

- ಸಕ್ಷಮ ಪ್ರಾಧಿಕಾರಿಗಳು ಅಂತಿಮವಾಗಿ ಅನುಮೋದಿಸಿದ ಎಲ್ಲ ಪುನರಾಭಿವೃದ್ಧಿ ಅಥವಾ ಮರು ನಿರ್ಮಾಣದ ಯೋಜನೆಗಳಿಗೆ ಮಾಹಿತಿ ಹಕ್ಕು ಅಧಿನಿಯಮ, 2005 ಅನ್ವಯಿಸತಕ್ಕದ್ದು.
- ಕೊಳೆಗೇರಿ ಪುನರಾಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳ ಸಂದರ್ಭದಲ್ಲಿ ಲೆಕ್ಕ ಪರಿಶೋಧನೆಯನ್ನು ಲೆಕ್ಕ ನಿಯಂತ್ರಕರು ಮತ್ತು ಮಹಾ ಲೇಖಾಪಾಲರ ಕಚೇರಿಯಿಂದ ಮತ್ತು ಶಿಥಿಲವಾದ, ಬಿರುಕುಬಿಟ್ಟ ಮತ್ತು ಅಸುಭದ್ರ ಕಟ್ಟಡಗಳ ಮರು ನಿರ್ಮಾಣದ ಸಂದರ್ಭದಲ್ಲಿ C&AG ಅವರು ಎಂಪ್ಯಾನಲ್ ಮಾಡಿದ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಮಾಡಿಸತಕ್ಕದ್ದು.
- ಮಹಾರಾಷ್ಟ್ರ ಸರ್ಕಾರದಿಂದ ನಿಯತಕಾಲಿಕ ಪರಿಶೀಲನೆಗಾಗಿ ಒಂದು ಉನ್ನತ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು. ಖ್ಯಾತ ವಾಸ್ತುಶಿಲ್ಪಿಗಳು, ನಗರ ಯೋಜಕರು, ಎಂಜಿನಿಯರ್‌ಗಳು ಮತ್ತು ನಾಗರಿಕ ಸಂಘಗಳ ಸದಸ್ಯರುಗಳು ಮತ್ತು ಸ್ಥಳೀಯ ನಗರ ಸಭೆಗಳು, ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಗಳು ಈ ಸಮಿತಿಯ ಸದಸ್ಯರಾಗಿರತಕ್ಕದ್ದು.

**4. ಕೇರಳಕ್ಕಾಗಿ ನೀಡಿರುವ ವಿಶೇಷ ಏರ್ಪಾಟುಗಳು ಏನು?**

ದೇಶದ ಅತ್ಯಂತ ಅನನ್ಯವಾದ ಪರಿಸರವನ್ನು ಹೊಂದಿರುವ ರಾಜ್ಯವೆಂದರೆ ಕೇರಳ. ಇದರ 300 ದ್ವೀಪಗಳು, ಇದರ ಹಿನ್ನೀರು ಪ್ರದೇಶದಲ್ಲಿ ಇದೆ. ಕೇರಳದ ವಿಶಿಷ್ಟ ಭೌಗೋಳಿಕ ಭೂ ವಿಸ್ತಾರವನ್ನು ಗಮನದಲ್ಲಿ ಇರಿಸಿಕೊಂಡು ಈ ಅಧಿಸೂಚನೆಯಲ್ಲಿ ಕರಾವಳಿ ಭಾಗಗಳಿಗಾಗಿ ಎಂದೇ ವಿಶೇಷ ಏರ್ಪಾಟುಗಳನ್ನು ಮಾಡಲಾಗಿದೆ.

ಕೇರಳದ ಹಿನ್ನೀರಿನಲ್ಲಿರುವ ದ್ವೀಪಗಳು ಕಿರಿದಾದ ಭೂ ಪ್ರದೇಶಗಳಾಗಿರುವ ಕಾರಣ ಇಲ್ಲಿ CRZ ನ್ನು ಉಬ್ಬರ ರೇಖೆಯಿಂದ ಭೂಮಿ ಕಡೆಗೆ 50 ಮೀಟರುಗಳಿಗೆ ಸೀಮಿತಗೊಳಿಸಲಾಗಿದೆ. ಈ ಪ್ರದೇಶ ಅಭಿವೃದ್ಧಿ ನಿಷಿದ್ಧ ಪ್ರದೇಶ. ಇಲ್ಲಿ ಯಾವ ಹೊಸ ಕಟ್ಟಡ ನಿರ್ಮಾಣವನ್ನು ಮಾಡಬಾರದು. ಸ್ಥಳೀಯರು ಈಗಿರುವ ವಾಸಗೃಹಗಳನ್ನು ಈ ಪ್ರದೇಶದಲ್ಲಿ

ರಿಪೇರಿ ಮಾಡಬಹುದು ಅಥವಾ ಮತ್ತೆ ಕಟ್ಟಬಹುದು. ಮೀನುಗಾರಿಕೆ ಜಟ್ಟಿ, ಮೀನು ಒಣಗಿಸುವ ಅಂಗಳ, ಬಲೆ ರಿಪೇರಿ ಅಂಗಳ, ಸಾಂಪ್ರದಾಯಿಕ ರೀತಿಯಲ್ಲಿ ಮೀನು ಸಂಸ್ಕರಣೆ, ದೋಣಿ ನಿರ್ಮಾಣ ಅಂಗಳಗಳು, ಮಂಜುಗೆಡ್ಡೆ ಸ್ಥಾವರ, ದೋಣಿ ರಿಪೇರಿ ಅಂಗಳ ಮುಂತಾದ ಅವಶ್ಯ ಮುಂಗರೆ ಸೌಕರ್ಯಗಳನ್ನು 0–50 ಮೀಟರು ಪ್ರದೇಶದಲ್ಲಿ ಕಟ್ಟಬಹುದು. ಉಬ್ಬರ ರೇಖೆಯಿಂದ 50 ಮೀಟರುಗಳನ್ನು ದಾಟಿ ಸ್ಥಳೀಯ ಸಮುದಾಯಗಳ ವಾಸಗೃಹಗಳನ್ನು ಸ್ಥಳೀಯ ಪಂಚಾಯತಿಗಳ ಅನುಮತಿಯೊಂದಿಗೆ ನಿರ್ಮಿಸಬಹುದು.

**5. ಸುಂದರಬನ ಮತ್ತು ಇತರ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶಗಳಿಗೆ ನೀಡಿರುವ ವಿಶೇಷ ಏರ್ಪಾಟುಗಳೇನು?**

ದೇಶದಲ್ಲೇ ಅತಿದೊಡ್ಡ ಕಾಂಡ್ಲ ಕಾಡು ಸುಂದರಬನದಲ್ಲಿದೆ. ಈ ಜೀವಾವರಣದಲ್ಲಿಯೇ ಸುಮಾರು 5 ಲಕ್ಷ ಜನರು ವಾಸಿಸುತ್ತಿದ್ದಾರೆ. ಹವಾಮಾನ ಬದಲಾವಣೆಯಿಂದ ಉಂಟಾಗುವ ಸಮುದ್ರಮಟ್ಟ ಏರಿಕೆ ಮತ್ತು ಬದಲಾಗುವ ಹವಾಮಾನ ಸ್ವರೂಪದ ತೀವ್ರ ಪರಿಣಾಮ ಸುಂದರಬನದ ಮೇಲೆ ಆಗುತ್ತಿದೆ. ಅಲ್ಲದೆ ಸ್ಥಳೀಯ ಸಮುದಾಯಗಳು ಮೂಲ ಸೌಕರ್ಯಗಳ ಕೊರತೆಯಿಂದ ಬಹಳ ಸಂಕಷ್ಟ ಅನುಭವಿಸುತ್ತಿವೆ. ಸುಂದರಬನ ಮತ್ತು ಅದೇ ರೀತಿಯ ಜೀವಿ ಪರಿಸರ ದೃಷ್ಟಿಯಿಂದ ಮಹತ್ವದ ಪ್ರದೇಶಗಳಾದ ಗುಜರಾತಿನ ಖಂಬಟ್ ಕೊಲ್ಲಿ ಮತ್ತು ಕಚ್ಛ್ ಕೊಲ್ಲಿ, ಮಹಾರಾಷ್ಟ್ರದ ಮಾಲವನ್, ಅಚ್ರಾ – ರತ್ನಗಿರಿ, ಕರ್ನಾಟಕದ ಕಾರವಾರ, ಕುಂದಾಪುರ, ಕೇರಳದ ವೆಂಬನಾಡು, ಒರಿಸ್ಸಾದ ಬೈತರ್‌ಕನಿಕಾ, ಆಂಧ್ರಪ್ರದೇಶದ ಕೊರಿಂಗಾ, ಪೂರ್ವ ಗೋದಾವರಿ ಮತ್ತು ಕೃಷ್ಣಾದಂತಹ ಪ್ರದೇಶಗಳಿಗೆಂದೇ ಒಂದು ಸಮಗ್ರ ನಿರ್ವಹಣಾ ಯೋಜನೆಯನ್ನು ಈ ಅಧಿಸೂಚನೆ ಅಡಿಯಲ್ಲಿ ರಚಿಸಬೇಕೆಂದು ಉದ್ದೇಶಿಸಲಾಗಿದೆ. ಈ ಪ್ರದೇಶಗಳನ್ನು ಅತಿ ಹೆಚ್ಚು ಅಪಾಯಕ್ಕೀಡಾಗಲಿರುವ ಕರಾವಳಿ ಪ್ರದೇಶಗಳು (CVCA) ಎಂದು ಘೋಷಿಸಲಾಗುವುದು ಮತ್ತು ಸ್ಥಳೀಯ ಸಮುದಾಯಗಳ ಜೊತೆಯಲ್ಲಿ ಸಮಾಲೋಚಿಸಿ ಒಂದು ಸಮಗ್ರ ನಿರ್ವಹಣಾ ಯೋಜನೆಯನ್ನು ಈ ಪ್ರತಿಯೊಂದು ಪ್ರದೇಶಕ್ಕೂ ಸಿದ್ಧಪಡಿಸಲಾಗುವುದು. ಸಮಗ್ರ ನಿರ್ವಹಣಾ ಯೋಜನೆಗಳನ್ನು ರಚಿಸಿ ಪ್ರಾರಂಭಿಸುವವರೆಗೆ, ಎಲ್ಲ ಅವಶ್ಯ ಮೂಲ ಸೌಕರ್ಯ ಅಭಿವೃದ್ಧಿಗಳನ್ನು ಸ್ಥಳೀಯ ನಿವಾಸಿಗಳಿಗಾಗಿ ಪ್ರಕರಣವಾರಾಗಿ ಕರಾವಳಿ ನಿರ್ವಹಣಾ ವಲಯ ಪ್ರಾಧಿಕಾರವು ಅನುಮತಿಸತಕ್ಕದ್ದು.

**6. ಗೋವಾಕ್ಕಾಗಿ ಮಾಡಿರುವ ವಿಶೇಷ ಏರ್ಪಾಟುಗಳು ಏನು?**

ಗೋವಾ ರಾಜ್ಯದ ಕರಾವಳಿ ಪ್ರದೇಶಗಳ ಸುಸ್ಥಿರ ಅಭಿವೃದ್ಧಿ ಮತ್ತು ಜೀವಿ ಪರಿಸರ ಸಂರಕ್ಷಣೆಗಾಗಿ ಕಟ್ಟುನಿಟ್ಟಾದ ನಿಯಂತ್ರಕ ಕಾರ್ಯತಂತ್ರಗಳೊಂದಿಗೆ ನಿರ್ದಿಷ್ಟ ಉಪಬಂಧಗಳನ್ನು ಒದಗಿಸಲಾಗಿದೆ. ಇತರೆ ಉಪಬಂಧಗಳು ಈ ಮುಂದಿನಂತಿವೆ.

- ಕಡಲ ತೀರದಲ್ಲಿ ವಾಸಿಸುತ್ತಿರುವ ಜನತೆಯ ಪರಂಪರಾಗತ ವೃತ್ತಿ ಮುಖ್ಯವಾಗಿ ಮೀನುಗಾರಿಕೆ ಮತ್ತು ತತ್ಸಂಬಂಧಿತ ಚಟುವಟಿಕೆ ಆಗಿರುವ ಕಾರಣ ಮತ್ತು ಮೀನುಗಾರ ಸಮುದಾಯಕ್ಕೆ ತಮ್ಮ ಜೀವನೋಪಾಯಕ್ಕಾಗಿ ಮೂಲಭೂತ ಸೌಕರ್ಯಗಳು ಅವಶ್ಯವಿರುವ ಕಾರಣ ಗೋವಾ ಸರ್ಕಾರವು ಸಮಗ್ರ ಸಮೀಕ್ಷೆ ನಡೆಸಿ ಅಂಥ ಸೌಕರ್ಯಗಳನ್ನು ಒದಗಿಸತಕ್ಕದ್ದು.
- CRZ ಪ್ರದೇಶಗಳಲ್ಲಿ ಸ್ಥಳೀಯ ಸಮುದಾಯದ ಕಟ್ಟಡಗಳ ಮರು ನಿರ್ಮಾಣ, ರಿಪೇರಿಗೆ ಅವಕಾಶ ನೀಡಬಹುದು.
- ಉಬ್ಬರ ಇಳಿತದ ಪರಿಣಾಮಕ್ಕೆ ಒಳಪಡುವ 'ಖಜಾನ್' ಭೂಮಿಗಳೆಂದು ಕರೆಯಲಾದ ಕೆಳಮಟ್ಟದ ಭೂಮಿಗಳ ನಕಾಶೆ ತಯಾರಿಸತಕ್ಕದ್ದು. ಅಂಥ ಭೂಮಿಯುದ್ದಕ್ಕೂ ಇರುವ ಕಾಂಡ್ಲ ಕಾಡುಗಳನ್ನು ಸಂರಕ್ಷಿಸತಕ್ಕದ್ದು ಮತ್ತು ಒಂದು ನಿರ್ವಹಣಾ ಯೋಜನೆಯನ್ನು ತಯಾರಿಸತಕ್ಕದ್ದು. ಖಜಾನ್ ಭೂಮಿಗಳಲ್ಲಿ ಯಾವ ಅಭಿವೃದ್ಧಿ ಚಟುವಟಿಕೆಗಳಿಗೂ ಅನುಮತಿ ನೀಡತಕ್ಕದ್ದಲ್ಲ.
- ಕೊಲ್ಲಿಗಳು ಮತ್ತು ಒಳಸಮುದ್ರಗಳ ಉದ್ದಕ್ಕೂ ಇರುವ ಮರಳು ದಿಬ್ಬಗಳು, ಮರಳು ತೀರಗಳನ್ನು ಮೋಜಣಿ ಮಾಡಿ ನಕಾಶೆ ತಯಾರಿಸತಕ್ಕದ್ದು.
- ಮಂಡ್ರೆಂ, ಮೊರ್ಜಿಂ, ಗೊಲ್ಗಿಬಾ ಮತ್ತು ಅಗೊಂಡಾ ಮರಳು ತೀರಗಳನ್ನು ಕಡಲಾಮೆ ಮರಿಗಳಿರುವ ನಿವೇಶನಗಳೆಂದು ಹೆಸರಿಸಲಾಗಿದೆ ಮತ್ತು ವನ್ಯಜೀವಿ ಸಂರಕ್ಷಣಾ ಅಧಿ ನಿಯಮ 1972ರ ಅಡಿಯಲ್ಲಿ ರಕ್ಷಿಸಲಾಗಿದೆ. ಈ ಪ್ರದೇಶಗಳನ್ನು ಮೋಜಣಿ ಮಾಡಿ ನಿರ್ವಹಣಾ ಯೋಜನೆಗಳನ್ನು ಈ ನಿವೇಶನಗಳ ಸಂರಕ್ಷಣೆಗಾಗಿ ತಯಾರಿಸತಕ್ಕದ್ದು. ಈ ಪ್ರದೇಶದಲ್ಲಿ ಯಾವ ಅಭಿವೃದ್ಧಿ ಚಟುವಟಿಕೆಗಳಿಗೂ ಅವಕಾಶ ನೀಡತಕ್ಕದ್ದಲ್ಲ.

## VIII. 1991ರ ಅಧಿಸೂಚನೆ ಅಡಿಯಲ್ಲಿ ಬಾಕಿ ಪ್ರಕರಣಗಳು ಮತ್ತು ಉಲ್ಲಂಘನೆಗಳನ್ನು ವರ್ಗಾಯಿಸುವುದು.

**1. 2011ರ ಅಧಿಸೂಚನೆ ಜಾರಿಗೆ ಬಂದರೆ 1991ರ CRZ ಅಧಿಸೂಚನೆಯಡಿಯಲ್ಲಿ ಈಗ ಬಾಕಿ ಇರುವ ಉಲ್ಲಂಘನೆಗಳನ್ನೆಲ್ಲಾ ಕ್ಷಮಿಸಲಾಗಿದೆ ಎಂದು ಅರ್ಥವೇ?**

ಖಂಡಿತಾ ಇಲ್ಲ. ಪರಿಸರ (ಸಂರಕ್ಷಣಾ) ಅಧಿನಿಯಮ 1986ರ 5ನೇ ಪ್ರಕರಣದ ಅಡಿಯಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೊರಡಿಸಬಹುದಾದ ಸೂಕ್ತ ನಿರ್ದೇಶನಕ್ಕೆ ಅನುಸಾರವಾಗಿ ಎಲ್ಲ CZMAಗಳಿಗೆ ಇತ್ತೀಚಿಗಿನ ಸೂಕ್ತ ನಕಾಶೆಗಳು, ಉಪಗ್ರಹಗಳ ಚಿತ್ರಗಳು ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಿ ಕ್ರಮ ಕೈಗೊಳ್ಳಲು ಒಂದು ನಿರ್ದಿಷ್ಟ ಸಮಯದ ಚೌಕಟ್ಟುಗಳೊಳಗೆ ಅನುಸರಿಸತಕ್ಕ ಪ್ರಕ್ರಿಯೆಯ ಬಗ್ಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ನೀಡಲಾಗುವುದು.

**2. 2011ರ ಅಧಿಸೂಚನೆ ಹೊರಡಿಸಿದ ಮೇಲೆ 1991ರ ಅಧಿಸೂಚನೆಯ ಅಡಿಯಲ್ಲಿ ತಯಾರಿಸಲಾದ ಕರಾವಳಿ ವಲಯ ನಿರ್ವಹಣಾ ಯೋಜನೆಗಳ ಪರಿಸ್ಥಿತಿ ಏನಾಗುತ್ತದೆ?**

2011ರ CRZ ಅಧಿಸೂಚನೆಯ ಪ್ರಕಾರ ಹೊಸ CZMPಗಳನ್ನು ಅನುಮೋದಿಸುವ ವರೆಗೂ 1991ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಗೆ ಪ್ರಕಾರ ತಯಾರಿಸಲಾದ CZMPಗಳನ್ನು ಅನುಸರಿಸಬೇಕು ಎಂದು ಈ ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

**3. 1991ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯನ್ನು ಉಲ್ಲಂಘಿಸಿ ನಿರ್ಮಿಸಲಾದ ಆದರ್ಶ ಇತ್ಯಾದಿ ಕಟ್ಟಡಗಳನ್ನು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಸಕ್ರಮೀಕರಣ ಮಾಡುತ್ತದೆಯೇ?**

ಇಲ್ಲ. ಪರಿಸರ ಸಂರಕ್ಷಣಾ ಅಧಿನಿಯಮ 1986ರ ಐದನೇ ಪ್ರಕರಣದ ಅಡಿಯಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೊರಡಿಸಬಹುದಾದ ಸೂಕ್ತ ನಿರ್ದೇಶನಕ್ಕೆ ಅನುಗುಣವಾಗಿ ಇತ್ತೀಚಿಗಿನ ಸೂಕ್ತ ನಕಾಶೆಗಳು, ಉಪಗ್ರಹ ಚಿತ್ರಗಳು ಮತ್ತು ಮಾಹಿತಿ ತಂತ್ರಜ್ಞಾನಗಳನ್ನು ಬಳಸಿ ಕ್ರಮ ಕೈಗೊಳ್ಳಲು ಒಂದು ನಿರ್ದಿಷ್ಟ ಸಮಯದ ಚೌಕಟ್ಟಿನೊಳಗೆ ಅನುಸರಿಸತಕ್ಕ ಪ್ರಕ್ರಿಯೆಯ ಬಗ್ಗೆ ಎಲ್ಲ CZMAಗಳಿಗೆ ನಿರ್ದಿಷ್ಟ ಮಾರ್ಗಸೂಚಿಗಳನ್ನು ನೀಡಲಾಗುತ್ತದೆ.

## IX. ದ್ವೀಪ ಸಂರಕ್ಷಣಾ ವಲಯ ಅಧಿಸೂಚನೆ

**1. ಒಂದು ಪ್ರತ್ಯೇಕ ದ್ವೀಪ ಸಂರಕ್ಷಣಾ ಅಧಿಸೂಚನೆ 2011 ಏಕೆ ಬೇಕು?**

ಅಂಡಮಾನ್ ಮತ್ತು ನಿಕೋಬಾರ್ ಸಮೂಹದಲ್ಲಿ ಸುಮಾರು 500 ದ್ವೀಪಗಳಿವೆ ಹಾಗೆಯೇ ಲಕ್ಷದ್ವೀಪದಲ್ಲಿ ಸುಮಾರು 30 ದ್ವೀಪಗಳಿವೆ. ಈ ಎರಡೂ ಸಾಗರ ದ್ವೀಪ ಸಮೂಹಗಳು ದೇಶದ ಪ್ರವರ್ಧಮಾನ ಜೀವಿ ವೈವಿಧ್ಯ ಕ್ಷೇತ್ರಗಳಿಗೆ ನೆಲೆವೀಡಾಗಿವೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ತಮ್ಮ ಭೂ ಮತ್ತು ಕಡಲ ಜೀವಿ ಸಂಪದ ವೈವಿಧ್ಯಕ್ಕೆ ಹೆಸರುವಾಸಿಯಾಗಿವೆ. ಅಂಡಮಾನ್ ಮತ್ತು ನಿಕೋಬಾರ್ ಭೂ ಪ್ರದೇಶದ ಶೇ. 85ರಷ್ಟು ಭಾಗವನ್ನು ಅರಣ್ಯಗಳು ವ್ಯಾಪಿಸಿವೆ. ಲಕ್ಷದ್ವೀಪ ಸಮೂಹ ಹವಳದ ದ್ವೀಪಗಳು. ಈ ದ್ವೀಪಗಳ ಭೌಗೋಳಿಕ ಪ್ರದೇಶ ಎಷ್ಟು ಚಿಕ್ಕದೆಂದರೆ 500 ಮೀಟರುಗಳ ಕರಾವಳಿ ನಿಯಂತ್ರಣ ವಲಯಗಳ ವಿನಿಯಮಗಳೆಲ್ಲ, ಒಂದರ ಮೇಲೊಂದು ವ್ಯಾಪಿಸುತ್ತದೆ. ಆದ್ದರಿಂದ ಒಂದು ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಇದರಲ್ಲಿ ಇಡೀ ಅರಣ್ಯಗಳ ನಿರ್ವಹಣೆಯನ್ನು (ಉತ್ತರ ಅಂಡಮಾನ್, ಮಧ್ಯ ಅಂಡಮಾನ್, ದಕ್ಷಿಣ ಅಂಡಮಾನ್ ಮತ್ತು ಗ್ರೇಟ್ ನಿಕೋಬಾರ್ ಇರುವ ಅಂಡಮಾನ್ ನಿಕೋಬಾರ್‌ನ ನಾಲ್ಕು ದ್ವೀಪಗಳನ್ನು ಬಿಟ್ಟು) ಕುರಿತು ಉಪಬಂಧ ಕಲ್ಪಿಸಲಾಗಿದೆ.

**2. Island Protection Zone (IPZ) ಅಧಿಸೂಚನೆ 2011ರ ಧ್ಯೇಯೋದ್ದೇಶಗಳೇನು?**

2011ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯ ಮುಖ್ಯ ಧ್ಯೇಯೋದ್ದೇಶಗಳೇನೆಂದರೆ:

- ಕರಾವಳಿ ಪ್ರದೇಶದ ಮೀನುಗಾರ ಸಮುದಾಯ, ಬುಡಕಟ್ಟು ಜನರು ಮತ್ತಿತರ ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯ ಭದ್ರತೆ.
- ಕರಾವಳಿ ತೀರಗಳನ್ನು ಸಂರಕ್ಷಿಸಿ ಕಾಪಾಡುವುದು.
- ಕರಾವಳಿ ಪ್ರದೇಶದಲ್ಲಿನ ನೈಸರ್ಗಿಕ ವಿಕೋಪ ಮತ್ತು ಜಾಗತಿಕ ತಾಪಮಾನ ಏರಿಕೆ ಕಾರಣದಿಂದ ಸಮುದ್ರ ಮಟ್ಟದ ಏರಿಕೆಗಳಿಂದ ಆಗಬಹುದಾದ ಅಪಾಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳ ಮೇಲೆ ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿ ಉತ್ತೇಜಿಸುವುದು.

**3. IPZ ಅಧಿಸೂಚನೆ 2011ರ ಕ್ಷೇತ್ರ ವ್ಯಾಪ್ತಿ ಏನು?**

ಉತ್ತರ ಅಂಡಮಾನ್, ಮಧ್ಯ ಅಂಡಮಾನ್, ದಕ್ಷಿಣ ಅಂಡಮಾನ್ ಮತ್ತು ಗ್ರೇಟ್ ನಿಕೋಬಾರ್ ಈ ನಾಲ್ಕು ದ್ವೀಪಗಳ ಸಂಬಂಧದಲ್ಲಿ ಈ ಅಧಿಸೂಚನೆ ಸಮುದ್ರ ಮುಖವಾಗಿ ಉಬ್ಬರ ರೇಖೆ ಉದ್ದಕ್ಕೆ 500 ಮೀಟರ್ ಒಳಗಿನ ಪ್ರದೇಶಕ್ಕೆ ಅನ್ವಯಿಸುತ್ತದೆ. ಆದರೆ ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪದ ಇತರ ಎಲ್ಲಾ ದ್ವೀಪಗಳಿಗಾಗಿ ಇಡೀ ಭೌಗೋಳಿಕ ಪ್ರದೇಶ ಮತ್ತು 12 ನಾಟಿಕಲ್ ಮೈಲುಗಳವರೆಗಿನ ಪ್ರದೇಶ ಈ ಅಧಿಸೂಚನೆಯ ವ್ಯಾಪ್ತಿಯಲ್ಲಿ ಬರುತ್ತದೆ.

**4. ಈ ದ್ವೀಪಗಳ ನಿರ್ವಹಣೆಗಾಗಿ ನೈಸರ್ಗಿಕ ವಿಕೋಪಗಳು ಸಂಭವಿಸುವ ಪುನರಾವರ್ತಿಸುವ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆಯೇ?**

ಹೌದು, ಭೂಕಂಪ, ಸುನಾಮಿಗಳು, ಚಕ್ರವಾತ ಇತ್ಯಾದಿ ನೈಸರ್ಗಿಕ ವಿಕೋಪಗಳಿಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಪದೇ ಪದೇ ತುತ್ತಾಗುತ್ತವೆ. ಸಮಗ್ರ ದ್ವೀಪ ನಿರ್ವಹಣಾ ಯೋಜನೆಗಳು ಎಲ್ಲ ಪ್ರಾಕೃತಿಕ ವಿಕೋಪಗಳು ಮತ್ತಿತರ ಪರಿಸರ ಸಮಸ್ಯೆಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತವೆ. IIMP (Integrated Island Management Plan)ಗಳನ್ನು ತಯಾರು ಮಾಡಲು ಸೂಕ್ತ ಮಾರ್ಗದರ್ಶಿಕೆಗಳನ್ನು ಅಧಿಸೂಚನೆಯಲ್ಲಿ ವಿವರವಾಗಿ ಬರೆಯಲಾಗಿದೆ.

# X. ಸಾರಾಂಶ: ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011 ಮತ್ತು ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991 ಎರಡನ್ನು ಹೋಲಿಸಿ ನೋಡುವುದು.

**1. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011ರಲ್ಲಿರುವ ಅತಿ ಮಹತ್ವಪೂರ್ಣ ಹೊಸ ಉಪಬಂಧಗಳು ಯಾವುವು?**

(i) 12 ನಾಟಿಕಲ್ ಮೈಲಿವರೆಗಿನ ಸಮುದ್ರದ ಇಡೀ ಜಲಪ್ರದೇಶ ಮತ್ತು ಒಳಸಮುದ್ರ, ನದಿ ಅಳಿವೆಯೊಳಗಿನ ಇಡೀ ಜಲ ಪ್ರದೇಶವು ಈ ಅಧಿಸೂಚನೆಯಿಂದ ನಿಯಂತ್ರಿಸಲ್ಪಡುತ್ತದೆ.

(ii) ಕರಾವಳಿ ಪ್ರದೇಶಗಳುದ್ದಕ್ಕೂ ಮೂಲ ಸೌಕರ್ಯವೂ ಸೇರಿದಂತೆ ಸ್ಥಳೀಯ ಸಮುದಾಯಗಳ ಜೀವನೋಪಾಯ ಮತ್ತು ಆಸ್ತಿಯ ಸುರಕ್ಷೆಗಾಗಿ ಒಂದು ವಿಕೋಪ ರೇಖೆಯನ್ನು ರಚಿಸಲು ಪ್ರಾರಂಭಿಸಲಾಗಿದೆ. ಇದನ್ನು ಸರ್ವೆ ಆಫ್ ಇಂಡಿಯಾ ಅವರು ರೇಖಿಸುತ್ತಾರೆ.

(iii) ಪರಿಸರ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಗಮನದಲ್ಲಿರಿಸಿ ಬೃಹತ್ ಮುಂಬೈ, ಕೇರಳ, ಗೋವ ಮತ್ತು ಸುಂದರಬನದಂಥ ಬಲು ಅಪಾಯಕ್ಕೀಡಾಗಬಲ್ಲ ಕರಾವಳಿ ಪ್ರದೇಶಗಳಿಗಾಗಿ ಹೊಸ ಆಡಳಿತ ವ್ಯವಸ್ಥೆಯನ್ನು ಒದಗಿಸಲಾಗಿದೆ.

(iv) ಮಾನವ ಕೃತ ಕಾರ್ಯಪ್ರಯತ್ನಗಳ ಕಾರಣದಿಂದ ಕರಾವಳಿಯುದ್ದಕ್ಕೂ ಉಂಟಾಗುವ ಭೂ ಕೊರೆತದ ದೃಷ್ಟಿಯಿಂದ ಕರಾವಳಿ ತೀರದ ತಹಲ್‌ವರೆಗಿನ ಉಪಗ್ರಹ ಬಿಂಬಗಳನ್ನು ಬಳಸಿ ತೀರದ ನಕಾಶೆ ತಯಾರಿಸುವುದು ಮತ್ತು ತೀರದ ರೇಖೆಯನ್ನು ಆ ತರುವಾಯ ''ಅತಿ ಕೊರೆತಕ್ಕೆ ಈಡಾಗುವ'' ''ಮಧ್ಯಮ ಕೊರೆತಕ್ಕೆ ಈಡಾಗುವ'' ಮತ್ತು ''ಕಡಿಮೆ ಕೊರೆತ ಹಾಗೂ ಸ್ಥಾಯಿತೀರಗಳು'' ಎಂದು ವರ್ಗೀಕರಿಸಲಾಗುವುದು. ಅತಿಯಾದ ಕೊರೆತಕ್ಕೆ ಈಡಾಗುವ ಪ್ರದೇಶಗಳಲ್ಲಿ ಯಾವುದೇ ಮುಂಗರೆ ಅಭಿವೃದ್ಧಿ ಕಾರ್ಯಕ್ಕೆ ಅವಕಾಶ ನೀಡಲಾಗುವುದಿಲ್ಲ.

(v) ಮೀನುಗಾರ ಸಮುದಾಯ ಮತ್ತಿತರ ಪರಂಪರಾಗತ ಕರಾವಳಿ ಸಮುದಾಯದ ದಿನೇ ದಿನೇ ಏರುತ್ತಿರುವ ಬೇಡಿಕೆಯನ್ನು ಪೂರೈಸುವ ಸಲುವಾಗಿ ಉಬ್ಬರ ರೇಖೆಯಿಂದ 200 ಮೀಟರುಗಳ ವರೆಗಿನ 'ಅಭಿವೃದ್ಧಿ ನಿಷಿದ್ಧ' ಪ್ರದೇಶವನ್ನು 100 ಮೀಟರ್‌ಗೆ ಇಳಿಸಲಾಗಿದೆ.

**2. 2011ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆಯಲ್ಲಿ ಹಾಗೆಯೇ ಉಳಿಸಿಕೊಂಡಿರುವ 1991ರ ಕರಾವಳಿ ನಿಯಂತ್ರಣ ವಲಯದ ಅಧಿಸೂಚನೆಯ ಮುಖ್ಯ ಉಪಬಂಧಗಳು ಯಾವುವು?**

(i) ಸಮುದ್ರ ಮುಖದ ಉದ್ದಕ್ಕೂ ಉಬ್ಬರ ರೇಖೆಯಿಂದ 500 ಮೀಟರುವರೆಗಿನ ಕ್ಷೇತ್ರ ವ್ಯಾಪ್ತಿ ಮತ್ತು ಉಬ್ಬರ ವಿಳಿತದಿಂದ ಪ್ರಭಾವಿತರಾದ ಜಲ ನಿಕಾಯಗಳ ಉದ್ದಕ್ಕೂ ಉಬ್ಬರ

ರೇಖೆಯಿಂದ 100 ಮೀಟರುಗಳ ವರೆಗಿನ ಕ್ಷೇತ್ರ ವ್ಯಾಪ್ತಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

(ii) ಕರಾವಳಿ ನಿಯಂತ್ರಣ ವಲಯಗಳನ್ನು ಕರಾವಳಿ ನಿಯಂತ್ರಣ ವಲಯ (ಜೀವಿ ಪರಿಸರ ದೃಷ್ಟಿಯಿಂದ ನಾಜೂಕಾದ ಪ್ರದೇಶಗಳು) ಕರಾವಳಿ ನಿಯಂತ್ರಣ ವಲಯ II (ನಗರ ಪ್ರದೇಶಗಳು) ಕರಾವಳಿ ನಿಯಂತ್ರಣ ವಲಯ III (ಗ್ರಾಮೀಣ ಪ್ರದೇಶ) ಎಂದು ವಿಂಗಡಿಸಿರುವುದನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

(iii) ಕರಾವಳಿ ನಿರ್ವಹಣಾ ವಲಯ ಯೋಜನೆಗಳನ್ನು ತಯಾರಿಸಲು ಕರಾವಳಿ ನಿಯಂತ್ರಣ ವಲಯ I, II ಮತ್ತು III ಇವುಗಳನ್ನು ಗುರುತಿಸಿ ಬಳಸಿಕೊಳ್ಳತಕ್ಕ ಕಾರ್ಯ ವಿಧಾನಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

**3. 2011ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2011ರಲ್ಲಿ ಕೈ ಬಿಡಲಾಗಿರುವ 1991ರ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 1991ರ ಬಲು ಮುಖ್ಯ ಉಪಬಂಧಗಳಾವುವು?**

(i) ಕರಾವಳಿ ನಿಯಂತ್ರಣ ವಲಯದಲ್ಲಿ ಇನ್ನಾವ SEZ ಯೋಜನೆಗಳಿಗೆ ಅವಕಾಶವಿಲ್ಲ.

(ii) ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪಗಳ ನಿಯಂತ್ರಣಕ್ಕಾಗಿ ರಚಿಸಲಾಗಿದ್ದ ಉಪಬಂಧಗಳನ್ನು ಕೈಬಿಡಲಾಗಿದೆ ಮತ್ತು ಆ ದ್ವೀಪಗಳ ನಿರ್ದಿಷ್ಟ ಭೌಗೋಳಿಕ ಸಮಸ್ಯೆ, ಪರಿಸರದ ಸೂಕ್ಷ್ಮತೆ ಮತ್ತು ದ್ವೀಪವಾಸಿಗಳ ಅಗತ್ಯತೆಯನ್ನು ಪೂರೈಸುವ ಸಲುವಾಗಿ IPZ ಅಧಿ ಸೂಚನೆ ಎಂಬ ಹೆಸರಿನ ಒಂದು ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

(iii) ಕರಾವಳಿ ನಿಯಂತ್ರಣ ವಲಯ IIIರಲ್ಲಿ ಗ್ರಾಮೀಣ ಸಮುದಾಯದ ಗೃಹ ನಿರ್ಮಾಣದ ವಿಸ್ತರಣೆಯನ್ನು ನಿರ್ಬಂಧಿಸುವ ಉಪಬಂಧಗಳನ್ನು ಕೈಬಿಡಲಾಗಿದೆ.

★★★★★